ರಷ್ಟು ದಾಖಲಾಗಿದ್ದ ಯುನಿಟ್‌ಗಳಿಗೂ ಬಿಲ್ ಭರಣ ಮಾಡಿರುತ್ತೀರಿ. ಅಂದರೆ, ಬಿಲ್ ಕಡಿಮೆ ಬಂದಾಗ ಯಾವುದೇ ವಿಚಾರವನ್ನು ಸಂಬಂಧಿತ ಕಛೇರಿಯಲ್ಲಿ ತಿಳಿಸಿರುವುದಿಲ್ಲ ಮತ್ತು ಆಕ್ಷೇಪಣೆಯು ಮಾಡಿರುವುದಿಲ್ಲ. ಸದರಿ ವಿಷಯವನ್ನು ಅಂದೇ ತಿಳಿಸಿದಲ್ಲಿ ಸಮಸ್ಯೆಯನ್ನು ಅಂದೇ ಬಗೆ ಹರಿಸಬಹುದಾಗಿತ್ತು. ಇದನ್ನು ಹೊರತುಪಡಿಸಿ, ಹಾಲಿ ಸ್ಥಿತಿಯಲ್ಲಿ ಹಿಂಬಾಕಿ ಬಿಲ್ ಭರಣ ಮಾಡುವ ಪ್ರಸಂಗ ಒದಗಿಬಂದಿರುವುದರಿಂದ ಅವುಗಳ ಬಗ್ಗೆ ಆಕ್ಷೇಪಣೆ ಮಾಡುವುದು ಸೂಕ್ತವಾದುದಲ್ಲ ಮತ್ತು ಸದರಿ ವಿಷಯದಲ್ಲಿ ಹೆಸ್ಕಾಂ., ಸಿಬ್ಬಂದಿಯ ನಿರ್ಲಕ್ಷತನವೂ ಇದೆ ಹಾಗೂ ದೂರುದಾರರು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸದೇ ಇರುವುದೂ ಸಹ ಕಾರಣವಾಗಿರುವುದನ್ನು ಸಹ ದೂರುದಾರರಿಗೆ ತಿಳಿಯಪಡಿಸಿ, ಮೂಲತಃ HT-9 ರ ಸ್ಥಾವರಕ್ಕೆ ದಿನಾಂಕ 29.04.2014 ರಂದು ತಪ್ಪಾಗಿ ವೈರಿಂಗ್ ಕನೆಕ್ಷನ್ ಮಾಡಿದ್ದನ್ನು ದಿನಾಂಕ 26.12.2018 ರಂದು ಪರಿಶೀಲಿಸದ ವೇಳೆಯಲ್ಲಿ ಕಂಡುಬಂದಿರುವುದರಿಂದ ದಿನಾಂಕ 29.04.2014 ರಿಂದ ದಿನಾಂಕ 26.12.2018 ರ ಅವಧಿಯವರೆಗೆ ಪ್ರತಿಶತ 50 ರಷ್ಟು ವಿದ್ಯುತ್ ಬೇಡಿಕೆ ಪ್ರಮಾಣವು ಕಡಿಮೆ ದಾಖಲಾಗಿರುವುದು ಅತೀ ಸ್ಪಷ್ಟವಾಗಿರವುದನ್ನು ಈಗಾಗಲೇ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಹೆಚ್.ಟಿ.ಎಮ್.ಆರ್, ಉಪವಿಭಾಗ, ಹೆಸ್ಕಾಂ., ಶಿರಸಿ ರವರು HT Rating ವರದಿ ಈಗಾಗಲೇ ನೀಡಿರುವ ಆಧಾರದಡಿಯಲ್ಲಿ ತಿಳಿದಿರುವುದರಿಂದ ಪ್ರತಿಶತ 50 ರಷ್ಟು ಡಿಮಾಂಡ್ ಕಡಿಮೆಯಾಗಿವುದು ಸ್ಪಷ್ಟ ಚಿತ್ರಣವಾಗಿರುತ್ತದೆ. ಅದ್ದರಿಂದ ದಿನಾಂಕ 29.04.2014 ರಿಂದ ದಿನಾಂಕ 26.12.2018 ರ ಅವಧಿಯವರೆಗಿನ Short Claim ವನ್ನು ಕಂಪನಿ ನಿಯಮಾನುಸಾರ ಕಡ್ಡಾಯವಾಗಿ ಭರಣ ಮಾಡಬೇಕಾಗುತ್ತದೆ ಎಂದು ಸದಸ್ಯರಾದ ಉಪಲೆಕ್ಕನಿಯಂತ್ರಣಾಧಿಕಾರಿಯವರು ವಿಚಾರಣಾ ವೇದಿಕೆಯಲ್ಲಿ ತಿಳಿಸಿರುವುದು ಮನವರಿಕೆಯಾಗಿರುತ್ತದೆ.

**ಆದಾಗ್ಯೂ ಪ್ರಕರಣದ ಕುರಿತು ಈ ಕೆಳಕಾಣಿಸಿದ ಅಧಿಕಾರಿ/ನೌಕರರ/ಪ್ರತಿನಿಧಿ ರವರ ವಾಸ್ತವ ಹೇಳಿಕೆಯನ್ನು ಸಹ ಪಡೆದು ಪರಾಮರ್ಶಿಸಲಾಗಿರುತ್ತದೆ.**

9) ಪ್ರಕರಣದ ಕುರಿತು ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಎಂ.ಟಿ. ವಿಭಾಗ, ಹೆಸ್ಕಾಂ., ಹುಬ್ಬಳ್ಳಿ ರವರು ತಿಳಿಸಿರುವುದೇನೆಂದರೆ,-ಶ್ರೀ ಮಂಜುನಾಥ ನವಲೆ, ಸಹಾಯಕ ಇಂಜಿನೀಯರ್(ವಿ), ಹೆಚ್.ಟಿ.ಎಂ.ಆರ್. ಉಪವಿಭಾಗ ಹೆಸ್ಕಾಂ., ಶಿರಸಿ ರವರು HT-9 ರ ಸ್ಥಾವರವನ್ನು ದಿನಾಂಕ 24.12.2018 ರಂದು ಪರಿಶೀಲಿಸಲು ಹೋದ ವೇಳೆಯಲ್ಲಿ ದೂರವಾಣಿ ಮುಖಾಂತರ ಮಾತನಾಡಿ,- ಗ್ರಾಹಕರ ವಿದ್ಯುತ್ ಪರಿವರ್ತಕದಿಂದ ಬಂದಂತಹ ವಿದ್ಯುತ್ ಪ್ರವಾಹವು CT ಸೆಕೆಂಡರಿಗೆ Mismatch ಆಗುತ್ತಿದೆ ಎಂದು ತಿಳಿಸಿ ಸೂಕ್ತ ತಾಂತ್ರಿಕ ಮಾರ್ಗದರ್ಶನ ನೀಡಬೇಕೆಂದು ಕೋರಿಕೊಂಡಿರುವ ಅಡಿಯಲ್ಲಿ,

ದಿನಾಂಕ 26.12.2018 ರಂದು ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಹೆಸ್ಕಾಂ., ಹೊನ್ನಾವರ, ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಕಾರ್ಯ ಮತ್ತು ಪಾಲನಾ ಉಪವಿಭಾಗ, ಹೆಸ್ಕಾಂ., ಭಟ್ಕಳ, ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಹೆಚ್.ಟಿ.ಎಂ.ಆರ್. ಉಪವಿಭಾಗ ಹೆಸ್ಕಂ., ಶಿರಸಿ, ಸಹಾಯಕ ಇಂಜಿನೀಯರ್(ವಿ), ಹೆಚ್.ಟಿ.ಎಂ.ಆರ್. ಉಪವಿಭಾಗ ಹೆಸ್ಕಾಂ., ಶಿರಸಿ, ಶಾಖಾಧಿಕಾರಿ, ಕಾರ್ಯ ಮತ್ತು ಪಾಲನಾ ಉಪವಿಭಾಗ, ಹೆಸ್ಕಾಂ., ಮುರ್ಡೇಶ್ವರ ಮತ್ತು ದೂರುದಾರರ ಪ್ರತಿನಿಧಿಯಾದ ಶ್ರೀ ನಾಗರಾಜ ಶೆಟ್ಟಿ ಮತ್ತು ಶ್ರೀ ಭಾಸ್ಕರ ಕಲ್ಮನೆ ಇವರುಗಳ ಜೊತೆ ಸ್ಥಾವರವನ್ನು ಪರೀಕ್ಷಿಸಲಾಗಿ,**–ಸ್ಥಾವರಕ್ಕೆ ಮಾಡಿದ CT ವೈರಿಂಗ್ ಕನೆಕ್ಷನ್ ತಪ್ಪಾಗಿದ್ದುದು ಅಂದರೆ, CT ಯ 1S1 ಟರ್ಮಿನಲ್‌ನಿಂದ 2 ವೈಯರ್ ಬಂದಿದ್ದು ಅವುಗಳು ಮೇನ್ ಮತ್ತು ಚೆಕ್ ಮೀಟರ್‌ಗೆ ಪ್ಯಾರಲಲ್ ಆಗಿ ವೈರಿಂಗ್ ಮಾಡಿದ್ದು ಕಂಡು ಬಂದಿದ್ದು ಈ ಎರಡು ಮಾಪಕಗಳು ಪ್ಯಾರಲಲ್ ಆಗಿದ್ದರಿಂದ CT ಯಿಂದ ಬಂದಂತ ವಿದ್ಯುತ್ ವಾಹಕವು ಡಿವೈಡ್ ಆಗಿ ಅರ್ಧ ಮೇನ್ ಮೀಟರ್ ಗೆ ಇನ್ನರ್ಧ ಚೆಕ್ ಮೀಟರ್‌ಗೆ ಹೋಗುತ್ತಿತ್ತು.** ಈ ವಿಷಯವನ್ನು ಎಲ್ಲರ ಸಮ್ಮುಖದಲ್ಲಿ ಹಾಜರಿದ್ದಂತ ದೂರುದಾರರ ಪ್ರತಿನಿಧಿಯಾದ ಶ್ರೀ ನಾಗರಾಜ ಶೆಟ್ಟಿ ಮತ್ತು ಶ್ರೀ ಭಾಸ್ಕರ ಕಲ್ಮನೆ ಇವರಿಗೂ ಮನವರಿಕೆಮಾಡಿಕೊಡಲಾಗಿರುವುದು ಸ್ಥಾವರಕ್ಕೆ ಮೇನ್ ಮೀಟರ್ ಮತ್ತು ಚೆಕ್ ಮೀಟರ್ ಇದ್ದಾಗ ಸಿಇಎ ನಿಯಮಾವಳಿ ಪ್ರಕಾರ 1 CT ಕೋರ್‌ವನ್ನು ಉಪಯೋಗಿಸಿ 2 ಮಾಪಕಗಳನ್ನು ಸಿರೀಸ್ ಆಗಿ ವೈರಿಂಗ್ ಮಾಡ ಬೇಕಾಗಿರುವುದು ಕಾನೂನು ಇದ್ದರೂ ಸಹ 1 ಕೋರ್ CT ಯ 1S1 ಟರ್ಮಿನಲ್‌ನಿಂದ 2 ವೈಯರ್‌ಗಳು ಉಪಯೋಗಿಸಿ ಮೇನ್ ಮತ್ತು ಚೆಕ್ ಮೀಟರ್‌ಗೆಪ್ಯಾರಲಲ್ ಆಗಿ ವೈರಿಂಗ್ ಮಾಡಿರುವುದು ತಪ್ಪು ಎಂಬುದನ್ನು ಗಮನಕ್ಕೆ ತಂದಿರುವುದು ಮನದಟ್ಟಾಗಿರುತ್ತದೆ.

ಅಲ್ಲದೇ, ಪ್ರಕರಣದ ಕುರಿತು ದಿನಾಂಕ 28.12.2018 ರಂದು ಮುಖ್ಯ ಇಂಜಿನೀಯರ್(ವಿ), ಹುಬ್ಬಳ್ಳಿ ವಲಯ, ಹೆಸ್ಕಾಂ., ಹುಬ್ಬಳ್ಳಿ ಇವರಿಗೆ ವಸ್ತು ಸ್ಥಿತಿ ಅಂಶವನ್ನು ತಿಳಿಯಪಡಿಸಿರುವುದು, ವೈರಿಂಗ್ ಕನೆಕ್ಷನ್ ತಪ್ಪಾಗಿ ನೀಡಲಾದ ಶ್ರೀ ವಿ.ಐ.ಭಟ್ಟ, ಹೆಚ್.ಟಿ.ಎಂ.ಆರ್. ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಶಿರಸಿ ಇವರ ವಿರುದ್ಧ ತಕ್ಷಣ ಕ್ರಮ ಕೈಗೊಳ್ಳಬೇಕಾಗಿಯೂ ಮತ್ತು ಈ ತರಹದ ಇನ್ನುಳಿದ ಸ್ಥಾವರಗಳ ವೈರಿಂಗ್ ಪರಿಶೀಲನೆ ಮಾಡುವ ಅಗತ್ಯತೆ ಇದೆ ಎಂದು ತಿಳಿಸಿ, ಮುಖ್ಯ ಇಂಜಿನೀಯರ್(ವಿ), ಹುಬ್ಬಳ್ಳಿ ವಲಯ, ಹೆಸ್ಕಾಂ., ಹುಬ್ಬಳ್ಳಿ ರವರ ಆದೇಶದನ್ವಯ ಅಧೀಕ್ಷಕ ಇಂಜಿನೀಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತ, ಹೆಸ್ಕಾಂ., ಶಿರಸಿ ರವರ ನೇತೃತ್ವದಲ್ಲಿ ಒಂದು ತಂಡವನ್ನು ರಚನೆ ಮಾಡಿ ಸುಮಾರು 11 ಸ್ಥಾವರವನ್ನು ಕುಲಂಕುಶವಾಗಿ ಪರೀಶಿಲಿಸಲಾಗಿ ಅವುಗಳಲ್ಲಿ ವೈರಿಂಗ್ ಕನೆಕ್ಷನ್ ಸರಿಯಾಗಿರುವುದನ್ನು ಕಂಡುಬಂದಿರುವುದು, ಆದಾಗ್ಯು, HT-34 ರ ಸ್ಥಾವರವನ್ನು ಪರಿಶೀಲಿಸಿದಾಗ ಸಹಾಯಕ ಕಾರ್ಯನಿವಾಹಕ ಇಂಜಿನೀಯರ್(ವಿ), ಕಾರ್ಯ ಮತ್ತು ಪಾಲನಾ ಉಪವಿಭಾಗ, ಹೆಸ್ಕಾಂ., ಭಟ್ಕಳ ರವರು ತಿಳಿಸಿರುತ್ತಾರೆ.

ಶ್ರೀ ವಿ.ಐ.ಭಟ್ಟ ರವರು ಹೆಚ್.ಟಿ.ಎಂ.ಆರ್. ಉಪವಿಭಾಗ ಹೆಸ್ಕಾಂ., ಶಿರಸಿಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಆಗಿ 2012 ರಲ್ಲಿ ಕೆಲಸಕ್ಕೆ ಹಾಜರಾಗಿದ್ದು ಅವರಿಗೆ ತಾಂತ್ರಿಕ ಜ್ಞಾನ ಕಡಿಮೆ

ಇದ್ದು ಈ ನಿಮಿತ್ತ, ಹೆಚ್.ಟಿ.ಎಂ.ಆರ್. ಉಪವಿಭಾಗಕ್ಕೆ ಹೆಚ್ಚಿನ ತಾಂತ್ರಿಕ ಜ್ಞಾನ ಹೊಂದಿದವರನ್ನು ನಿಯೋಜಿಸಲು ಆಗಿನ ಕಾರ್ಯನಿರ್ವಾಹಕ ಇಂಜಿನೀಯರ್(ವಿ), MT Division, Hubli ರವರು ಮುಖ್ಯ ಇಂಜಿನೀಯರ್(ವಿ), ಹುಬ್ಬಳ್ಳಿ ವಲಯ, ಹೆಸ್ಕಾಂ., ಹುಬ್ಬಳ್ಳಿ ರವರಿಗೆ 2012 ರಲ್ಲಿ ಪತ್ರ ಬರೆದಿರುವುದಾಗಿಯೂ ಮತ್ತು ತದನಂತರದಲ್ಲಿಯೂ ಸದರಿಯವರನ್ನು ಆ ಜಾಗೆಯಿಂದ ಬದಲಾವಣೆ ಮಾಡುವಂತೆ ನಿರಂತರವಾಗಿ ಅಂದರೆ 2018 ರ ವರೆಗೂ ಕಂಪನಿ ಕಛೇರಿಗೆ ಪತ್ರ ಬರೆದಿದ್ದು ಸಹ ಗಮನಿಸಲಾಯಿತು.

ಹೆಚ್.ಟಿ.ಎಂ.ಆರ್. ಹೆಸ್ಕಾಂ., ಶಿರಸಿ ಉಪವಿಭಾಗದಲ್ಲಿ ಅಂದು ಕಾರ್ಯನಿರ್ವಹಿಸುತ್ತಿರುವ ಶ್ರಿ ವಿ.ವಿ.ಮುಗಳಿ, ಯಂತ್ರಕರ್ಮಿ ದರ್ಜೆ–1 ಮತ್ತು ಶ್ರೀ ಗಣಪತಿ ವಾಯ್.ಹುಬ್ಬಳ್ಳಿಕರ ಮಾರ್ಗದಾಳು ಇವರು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ರವರು ನಿರ್ದೇಶಿಸಿದ ರೀತಿಯಲ್ಲಿಯೇ ಕೆಲಸ ನಿರ್ವಹಿಸಿದ್ದು ಅವರ ಹೇಳಿಕೆಯು ಸಹ ತುಂಬಾ ಮಹತ್ವದಾಗಿರುವುದಾಗಿ ತಿಳಿಸಿದರು.

ಮುಂದುವರೆದು, ಯಾವುದೇ HT ಸ್ಥಾವರದ CT/PT ಚೆಂಬರ್ ಓಪನ್ ಮಾಡಿದಾಗ, ಸದರ ಚೆಂಬರ್‌ನ ಒಳಗೆ ಇರುವ CT/PT ಗಳ Polarity ಮತ್ತು ratio Test ಗಳನ್ನು ಮಾಡಿ ದೃಢಪಡಿಸಿ ತದನಂತರ Resealing ಮಾಡುವ ನಿಯಮ ಇದೆ. HT-9 ಸ್ಥಾವರ ಕಮಿಷನ್ ಆದ ದಿನಾಂಕದಿಂದ 26.12.2018 ರ ವರೆಗೆ ಸುಮಾರು 3-4 ಸಲ CT/PT ಚೆಂಬರ್ ಓಪನ್ ಮಾಡಲಾಗಿದ್ದು ವೈರಿಂಗ್ ಸರಿಯಿದೆ ಎಂದು ವರದಿಗಳಲ್ಲಿ ನಮೂದಿಸಿ Resealing ಮಾಡಲಾಗಿರುತ್ತದೆ ಎಂಬುದನ್ನು ತಿಳಿಯಪಡಿಸಿದ್ದು ಇರುತ್ತದೆ.

ಈ ಮೇಲಿನ ಅಂಶದ ಕುರಿತು ಪತ್ರ ವ್ಯವಹರಿಸಿದ ದಾಖಲೆಯನ್ನು ನೀಡಿರುವುದರಿಂದ ಅದನ್ನು ಸಂಪೂರ್ಣ ಪರಿಶೀಲಿಸಲಾಗಿರುತ್ತದೆ.

10) ಪ್ರಕರಣದ ಕುರಿತು ಶ್ರೀ ವಿ.ಐ.ಭಟ್ಟ, ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಹೆಚ್.ಟಿ.ಎಂ.ಆರ್. ಉಪವಿಭಾಗ ಹೆಸ್ಕಾಂ., ಶಿರಸಿ ರವರು ತಿಳಿಸುವುದೇನೆಂದರೆ– ದಿನಾಂಕ 29.04.2014 ರಂದು HT-9 ಸ್ಥಾವರಕ್ಕೆ CT/PT Wiring connection ವನ್ನು ಡ್ಯೂಯೋಲ್ ರೇಷ್ಯೂ ದಿಂದ ಸಿಂಗಲ್ ರೇಷ್ಯೂಗೆ ಕನೆಕ್ಷನ್ ಮಾಡುವ ಪೂರ್ವದಲ್ಲಿ ಅಂದಿನ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಎಂ.ಟಿ.ವಿಭಾಗ, ಹೆಸ್ಕಾಂ., ಹುಬ್ಬಳ್ಳಿ ರವರ ಮೌಖಿಕ ಅದೇಶದನುಸಾರ ಕ್ರಮಕೈಗೊಳ್ಳಲಾಗಿರುತ್ತದೆ. ಆದರೆ **ರೇಟಿಂಗ್ ವರದಿಯನ್ನು ಮಾತ್ರ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಎಂ.ಟಿ.ವಿಭಾಗ, ಹೆಸ್ಕಾಂ., ಹುಬ್ಬಳ್ಳಿ ರವರಿಗೆ ಸಲ್ಲಿಸಿರುವುದಿಲ್ಲ ಈ ಬಗ್ಗೆ ತನ್ನ ತಪ್ಪಾಗಿದೆ. ಚೆಕ್ ಮೀಟರಿಗೆ ಕನೆಕ್ಷನ್ ನೀಡುವಾಗ ಕಣ್–ತಪ್ಪಿನಿಂದ ಅಚಾನಕ್ ಆಗಿ ಸಿರೀಸ್ ಕನೆಕ್ಷನ್ ಮಾಡುವ ಬದಲಾಗಿ ಪ್ಯಾರಲಲ್ ಕನೆಕ್ಷನ್ ಆಗಿದೆ. ಇದರ ಕನೆಕ್ಷನ್ ಬಗ್ಗೆ ತನಗೆ ಹೇಗೆ ಮಾಡಬೇಕೆಂದು ಅಂದು ಗೊತ್ತಿದ್ದಿಲ್ಲ. ಇದೇ ಮೊದಲ ಬಾರಿ ಆಗಿತ್ತು. ಆದರೆ, ಈ ಸ್ಥಾವರಕ್ಕೆ ಯಾವುದೇ ದೂರು ಬರದೇ ಇದ್ದುದರಿಂದ ಮಾಡಿದ ತಪ್ಪನ್ನು ಸರಿಪಡಿಸಲು ಒಂದೂ ಅವಕಾಶ ತನಗೆ ದೊರಕಿರುವುದಿಲ್ಲ ಮತ್ತು ಸದರಿ ತಪ್ಪನ್ನು ಯಾವುದೇ**

ಉದ್ದೇಶಪೂರ್ವಕವಾಗಲಿ ಅಥವಾ ಕಂಪನಿಗೆ ಹಾನಿ ಮಾಡುವುದಾಗಲಿ ಮಾಡಿರುವುದಿಲ್ಲ. ಕಾರ್ಯನಿರ್ವಹಣೆಯಲ್ಲಿ ಬೇಜವಾಬ್ದಾರಿತನ, ನಿರ್ಲಕ್ಷತನದಿಂದ ತಪ್ಪಾಗಿರುವುದು ಹೌದು ಮತ್ತು ತನ್ನ ಜೊತೆಯಲ್ಲಿ ಬಂದಂತ ಶ್ರೀ ವಿ.ವಿ.ಮುಗಳಿ, ಯಂತ್ರಕರ್ಮಿ ದರ್ಜೆ–2 ಹಾಗೂ ಶ್ರೀ ಗಣಪತಿ ಹುಬ್ಬಳ್ಳಿಕರ ಮಾರ್ಗದಾಳು ಇವರಿಗೂ ಸಹ ವೈರಿಂಗ್ ಕನೆಕ್ಷನ್ ಬಗ್ಗೆ ಹೆಚ್ಚಿನ ಸರಿಯಾದ ಜ್ಞಾನ ಇರುವುದಿಲ್ಲ ಎಂದು ವಿಚಾರಣಾ ವೇದಿಕೆಯಲ್ಲಿ ತಿಳಿಸಿದರು.

**11)** ದಿನಾಂಕ 26.12.2018 ರಂದು ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಎಂ.ಟಿ ವಿಭಾಗ, ಹೆಸ್ಕಾಂ., ಹುಬ್ಬಳ್ಳಿ, ರವರ ಮಾರ್ಗದರ್ಶನದಂತೆ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಹೆಸ್ಕಾಂ., ಹೊನ್ನಾವರ, ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಕಾರ್ಯ ಮತ್ತು ಪಾಲನಾ ಉಪವಿಭಾಗ, ಹೆಸ್ಕಾಂ., ಭಟ್ಕಳ, ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಹೆಚ್.ಟಿ.ಎಂ.ಆರ್. ಉಪವಿಭಾಗ ಹೆಸ್ಕಾಂ., ಶಿರಸಿ, ಶಾಖಾಧಿಕಾರಿ, ಕಾರ್ಯ ಮತ್ತು ಪಾಲನಾ ಉಪವಿಭಾಗ, ಹೆಸ್ಕಾಂ., ಮುರ್ಡೇಶ್ವರ ಮತ್ತು ದೂರುದಾರರ ಪ್ರತಿನಿಧಿಯಾದ ಶ್ರೀ ನಾಗರಾಜ ಶೆಟ್ಟಿ ಮತ್ತು ಶ್ರೀ ಭಾಸ್ಕರ ಕಲ್ಮನೆ ಇವರುಗಳ ಸಮ್ಮುಖದಲ್ಲಿಯೇ ತಪ್ಪಾದ ವೈರಿಂಗ್ ಕನೆಕ್ಷನ್‌ವನ್ನು ಸರಿಪಡಿಸಲಾಯಿತು. ಹೀಗೆ ವೈರಿಂಗ್ ಕನೆಕ್ಷನ್ ಮಾಡಿದ್ದರಿಂದ ಪ್ರತಿ ತಿಂಗಳು 3 ಲಕ್ಷದಷ್ಟು ಹಣ ನಷ್ಟವಾಗುವುದನ್ನು ತಪ್ಪಿಸಿ ಕಂಪನಿ ಹಿತದೃಷ್ಟಿಯಿಂದ ಪ್ರಾಮಾಣಿಕ ಪ್ರಯತ್ನ ಮಾಡಿ ಕಂಪನಿಗೆ ಲಾಭದಾಯಕ ಮಾಡಲಾಗಿರುವುದಾಗಿ ಸಹಾಯಕ ಇಂಜಿನೀಯರ್(ವಿ), ಹೆಚ್.ಟಿ.ರೇಟಿಂಗ್ ಉಪವಿಭಾಗ ಹೆಸ್ಕಾಂ., ಶಿರಸಿ ರವರು ತಿಳಿಸಿರುವುದು ಸಹ ಮನವರಿಕೆಯಾಗಿರುತ್ತದೆ.

**12)** ಶ್ರೀ ರಾಮು ಭಟ್ಟ, ಇಲೆಕ್ಟ್ರೀಸಿಯನ್, ನವೀನ ಹೊಟೇಲ್ ಲಿ., ಸಾ॥ ಮುರ್ಡೇಶ್ವರ ರವರು ತಿಳಿಸಿರುವುದೇನೆಂದರೆ,– ದಿನಾಂಕ 29.04.2014 ರಂದು ನವೀನ ಹೊಟೇಲ್ ಲಿ., ಸಾ॥ ಮುರ್ಡೇಶ್ವರ ದಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಹೆಚ್.ಟಿ ಎಂ.ಆರ್. ಹೆಸ್ಕಾಂ., ಉಪವಿಭಾಗ ಶಿರಸಿ ರವರು HT-9 ಸ್ಥಾವರಕ್ಕೆ HT Rating ಮಾಡಲು ಬಂದಿದ್ದು ಹೌದು ಮತ್ತು ಆ ದಿನರಂದು HT Rating ಮಾಡಿದ ವರದಿಗೆ ಸಹಿ ಮಾಡಿರುವುದು ಹೌದು ಎಂದು ತಿಳಿಸುವುದರ ಜೊತೆಗೆ ಅವುಗಳ ಬಗ್ಗೆ ಯಾವುದೇ ನಿಖರವಾದ ಅಂಶ ತನಗೆ ತಿಳಿದಿರುವುದಿಲ್ಲ ಎಂದು ಸ್ಪಷ್ಟವಾಗಿ ತಿಳಿಸಿದೇ ಇರುವುದು ಮನವರಿಕೆಯಾಗಿರುತ್ತದೆ.

**13)** ಶ್ರೀ ವಿ.ವಿ.ಮುಗಳಿ ಯಂತ್ರಕರ್ಮಿ ದರ್ಜೆ–2 ಹೆಚ್.ಟಿ.ಎಂ.ಆರ್. ಉಪವಿಭಾಗ ಹೆಸ್ಕಾಂ., ಶಿರಸಿ ರವರ ತಿಳಿಸಿರುವುದೇನೆಂದರೆ, ದಿನಾಂಕ 29.04.2014 ರಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಹೆಚ್.ಟಿ.ಎಂ.ಆರ್. ಉಪವಿಭಾಗ ಹೆಸ್ಕಾಂ., ಶಿರಸಿ ರವರ ಜೊತೆಗೆ ನವೀನ ಹೊಟೇಲ್ ಲಿ., ಸಾ॥ ಮುರ್ಡೇಶ್ವರ ತಾ॥ ಭಟ್ಕಳ ರವರ HT-9 ಸ್ಥಾವರವನ್ನು ರೇಟಿಂಗ್ ಮಾಡಲು ಹೋಗಿದ್ದರೂ ಅಂದು ಕೈಗೊಂಡ ತಾಂತ್ರಿಕತೆಯ ಬಗ್ಗೆ ಹೆಚ್ಚಿನ ಮಾಹಿತಿ ತನಗೆ ತಿಳಿದಿರುವುದಿಲ್ಲ ಮತ್ತು ಇದರ ಕನೆಕ್ಷನ್ ಮಾಡುವ ಬಗ್ಗೆ ನನಗೆ ಏನೂ ಗೊತ್ತಿಲ್ಲ ಎಂದು ಸ್ಪಷ್ಟವಾಗಿ ತಿಳಿಸಿರುವುದು ಮನವರಿಕೆಯಾಗಿರುತ್ತದೆ.

**14**) ಶ್ರೀ ಗಣಪತಿ ಹುಬ್ಬಳ್ಳಿಕರ ಮಾರ್ಗದಾಳು (ಈ ಹಿಂದೆ ಅಂದರೆ ದಿನಾಂಕ 29.04.2014 ರಂದು ಹೆಚ್.ಟಿ.ಎಂ.ಆರ್. ಉಪವಿಭಾಗ ಹೆಸ್ಕಾಂ., ಶಿರಸಿಯಲ್ಲಿ ಕಾರ್ಯನಿರ್ವಹಿಸಿದವರು) ರವರ ತಿಳಿಸಿರುವುದೇನೆಂದರೆ,-ದಿನಾಂಕ 24.03.2014 ರಂದು HT-9 ಸ್ಥಾವರದ ಹೆಚ್.ಟಿ. ಕ್ಯುಬಿಕಲ್ ಕ್ಯಾಲಿಬಿರೇಷನ್ ಮಾಡಿ 3 CT/3 PT Wiring connection ಮಾಡಿದ್ದು ಇರುತ್ತದೆ. ಅಲ್ಲದೇ ಅಂದು ಮಾಡಿದ Wiring connection ಸರಿಯಾಗಿಯೇ ಇತ್ತು. ಪುನಃ ದಿನಾಂಕ 29.04.2014 ರಂದು HT-9 ಸ್ಥಾವರಕ್ಕೆ ರೇಟಿಂಗ್ ಮಾಡಿ ವೈಯರಿಂಗ್ ಬದಲಾವಣೆ ಮಾಡಿದರು. ಆದರೆ ಅವುಗಳ ಯಾಕೆ ಬದಲಾವಣೆ ಮಾಡಿದರು ಎಂಬ ನಿಖರವಾದ ಅಂಶವನ್ನು ತನಗೆ ತಿಳಿದಿರುವುದಿಲ್ಲಾ ಎಂದು ಸ್ಪಷ್ಟವಾಗಿ ತಿಳಿಸಿದ್ದು ಮನವರಿಕೆಯಾಗಿರುತ್ತದೆ.

**15**) ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಕಾರ್ಯ & ಪಾಲನಾ ಉಪವಿಭಾಗ, ಹೆಸ್ಕಾಂ., ಭಟ್ಕಳ ರವರು ತಿಳಿಸಿರುವುದೇನೆಂದರೆ,- ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಹೆಚ್.ಟಿ.ಎಂ.ಆರ್. ಉಪವಿಭಾಗ ಹೆಸ್ಕಾಂ., ಶಿರಸಿ ರವರು ದಿನಾಂಕ 29.04.2014 ರಂದು HT-9 ಸ್ಥಾವರಕ್ಕೆ ರೇಟಿಂಗ್ ಮಾಡಿ ವರದಿ ನೀಡಿರುವ ಆಧಾರದಡಿಯಲ್ಲಿಯೂ ಮತ್ತು ದಿನಾಂಕ 26.12.2018 ರಂದು ತಪ್ಪಾದ ಕನೆಕ್ಷನ್‌ವನ್ನು ಸರಿಪಡಿಸಿದ ವರದಿ ನೀಡಿರುವ ಆಧಾರದಡಿಯಲ್ಲಿ ಮಾಪಕವೂ ಒಟ್ಟೂ ಬಳಕೆಯ ಅರ್ಧದಷ್ಟು ಅಂದರೆ, 50% ರಷ್ಟು ಬಳಕೆಯನ್ನು ದಾಖಲಿಸುತ್ತಿದ್ದ ಕಾರಣದಿಂದಾಗಿಯೂ ಅಂದರೆ, ದಿನಾಂಕ 29.04.2014 ರಿಂದ 26.12.2018 ರವರೆಗಿನದು Condition of supply of Electricity of Distribution Licensees in the State of Karnataka ನಿಯಮ 29.03 ರಂತೆ, Supplimental Claims ಅಂಶವನ್ನು ಪರಿಗಣಿಸಿ ಹಿಂಬಾಕಿ ಮೊತ್ತ ರೂ.1,81,88,063.00 ರಷ್ಟು ಭರಣ ಮಾಡುವಂತೆ ಕ್ರಮ ಕೈಗೊಳ್ಳಲಾಗಿರುವುದಾಗಿಯೂ ಮತ್ತು ರೇಟಿಂಗ್ ವರದಿಯಲ್ಲಿ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಹೆಸ್ಕಾಂ., ಹೊನ್ನಾವರ, ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಕಾರ್ಯ ಮತ್ತು ಪಾಲನಾ ಉಪವಿಭಾಗ, ಹೆಸ್ಕಾಂ., ಭಟ್ಕಳ, ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಹೆಚ್.ಟಿ.ಎಂ.ಆರ್. ಉಪವಿಭಾಗ ಹೆಸ್ಕಾಂ., ಶಿರಸಿ, ಸಹಾಯಕ ಇಂಜಿನೀಯರ್(ವಿ), ಹೆಚ್.ಟಿ.ಎಂ.ಆರ್. ಉಪವಿಭಾಗ ಹೆಸ್ಕಾಂ., ಶಿರಸಿ, ಶಾಖಾಧಿಕಾರಿ, ಕಾರ್ಯ ಮತ್ತು ಪಾಲನಾ ಉಪವಿಭಾಗ, ಹೆಸ್ಕಾಂ., ಮುರ್ಡೇಶ್ವರ ಇವರೆಲ್ಲರ ಸಹಿ ಇದೆ. ಆದರೆ, ರಿಪೋರ್ಟಿಗೆ ಗ್ರಾಹಕರ ಪ್ರತಿನಿಧಿ ಸಹಿ ಮಾಡಲು ಕೇಳಿದಾಗ ಅವರು ನಿರಾಕರಿಸಿರುತ್ತಾರೆ ಹಾಗೂ ಪ್ರಕರಣದ ಕುರಿತು ವಿಡಿಯೋ ದಾಖಲೆ ಸಹ ಇದೆ ಎಂದು ವಿಚಾರಣಾ ವೇದಿಕೆಯಲ್ಲಿ ತಿಳಿಸಿದರು.

ಅಲ್ಲದೇ ಪ್ರಕರಣದ ಕುರಿತು ಈ ಹಿಂದೆ ಪತ್ರ ವ್ಯವಹರಿಸಿದ ದಾಖಲೆಯನ್ನು ಸಿ.ಜಿ.ಆರ್.ಎಫ್. ವೇದಿಕೆಗೆ ಸಲ್ಲಿಸಿದ್ದು ಇರುತ್ತದೆ.

16) ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಕಾರ್ಯ & ಪಾಲನಾ ವಿಭಾಗ ಹೊನ್ನಾವರ ರವರು ತಿಳಿಸಿರುವುದೇನೆಂದರೆ,-

Condition of supply of Electricity of Distribution Licensees in the State of Karnataka ನಿಯಮ 29.03 ರಂತೆ, Supplimental Claims ಹಿಂಬಾಕಿ ಮೊತ್ತ ರೂ.1,81,88,063.00 ರಷ್ಟು ಭರಣ ಮಾಡುವ ಅಂಶದ ಕುರಿತು ಕೈಗೊಂಡ ಕ್ರಮ ಸರಿಯಾಗಿದ್ದು, ಸದರಿ ಸ್ಥಾವರದ Wiring Connections 2014 ರಿಂದ ತಪ್ಪಾಗಿದ್ದರೂ ಸಹಿತ ವಿದ್ಯುತ್ ಉಪಯೋಗಿಸಿರುವುದರಿಂದ ಇಲ್ಲಿಯವರೆಗೆ ನೀಡಿದ ಬಿಲ್ಲಿನ ಪ್ರಕಾರ ಹಣ ಭರಣ ಮಾಡಿರುತ್ತಾರೆ. ಅಂದರೆ, ಶೇ. 50 ರಷ್ಟು ಮಾತ್ರ ಹಣ ಭರಣ ಮಾಡಿರುತ್ತಾರೆ. ಇನ್ನುಳಿದ ಶೇ. 50 ರಷ್ಟು ಹಣ ಭರಣ ಬಾಕಿ ಮಾಡಬೇಕಾಗಿರುವುದನ್ನು ತಿಳಿಸಿರುವುದು ಮನವರಿಕೆಯಾಗಿರುತ್ತದೆ.

17) ಸದಸ್ಯರಾದ ಉಪಲೆಕ್ಕನಿಯಂತ್ರಣಾಧಿಕಾರಿಯವರು ತಿಳಿಸಿರುವುದೇನೆಂದರೆ,- 2014 ರ ಅವಧಿಯ ಮುಂಚೆ ಮತ್ತು 2014 ರ ನಂತರ HT-9 ಸ್ಥಾವರಕ್ಕೆ Ab Normal/Sub Normal Consumption ಆಗಿರವ ಬಗ್ಗೆ ಆಗಿನ ಪ್ರಭಾರ ಹಿರಿಯ ಸಹಾಯಕರಾದ ಶ್ರೀ ಎ.ಪಿ.ನಾಯಕ, ಹೆಸ್ಕಾಂ., ಉಪವಿಭಾಗ, ಭಟ್ಕಳ ರವರು ಯಾವುದೆ ವ್ಯತ್ಯಾಸವನ್ನು ಮೇಲಾಧಿಕಾರಿಯವರ ಗಮನಕ್ಕೆ ತಂದಿರುವುದಿಲ್ಲ. ಮುಂದುವರೆದು ಈಗಾಗಲೇ ದಿನಾಂಕ 30.04.2019 ರಂದು ಭಟ್ಕಳ ಉಪವಿಭಾಗಕ್ಕೆ ಭೇಟಿ ನೀಡಿದಾಗ ಲೆಕ್ಕಾಧಿಕಾರಿ ಆಂತರಿಕ ಪರಿಶೋಧನೆ ರವರ 2013-2014 ರ ಸಾಲಿನ ಹೆಚ್.ಟಿ. ತಪಾಷಣೆಯ ವರದಿ ನೀಡಿದನ್ನು ಪರಿಶೀಲಿಸಿದಾಗ HT-9 ಸ್ಥಾವರಕ್ಕೆ ಬಳಕೆಯು ವ್ಯತ್ಯಾಸವಾಗಿರುವ ಬಗ್ಗೆ ವರದಿಯಲ್ಲಿ ತರಬೇಕಿತ್ತು. ಅದನ್ನು ತಂದಿರುವುದಿಲ್ಲ. ಅಲ್ಲದೇ, ಪ್ರತಿ ತಿಂಗಳು ತಪ್ಪದೇ ಹೆಚ್.ಟಿ. ಬಿಲ್ಲ ನ್ನು ಸಂಬಂಧಿಸಿದ ಹೆಸ್ಕಾಂ., ವಿಭಾಗ ಕಛೇರಿ, ಹೆಸ್ಕಾಂ., ಆಂತರಿಕ ಪರಿಶೋಧನೆ, ಹೆಚ್.ಟಿ.ಎಂ.ಆರ್. ಹೆಸ್ಕಾಂ., ಉಪವಿಭಾಗ ಶಿರಸಿ ಮತ್ತು ಹೆಚ್.ಟಿ. ಸೆಲ್, ನಿಗಮ ಕಛೇರಿ ಹುಬ್ಬಳ್ಳಿಗೆ ಕಳುಹಿಸ ಬೇಕಾಗಿರುತ್ತದೆ. ಆದರೆ, ಹೆಚ್.ಟಿ. ಸೆಲ್, ನಿಗಮ ಕಛೇರಿ ಹುಬ್ಬಳ್ಳಿಗೆ ಕಳುಹಿಸಿರುವ ಬಗ್ಗೆ ಯಾವುದೇ ದಾಖಲೆ ನೀಡಿರುವುದಿಲ್ಲ ಎಂಬ ಅಂಶದ ಬಗ್ಗೆಯೂ ತಿಳಿಸಿರುವುದು ಮನವರಿಕೆಯಾಗಿರುತ್ತದೆ.

**18)** HT-9 ಸ್ಥಾವರಕ್ಕೆ ಸಂಬಂಧಿಸಿದಂತೆ ಹಿಂಬಾಕಿ ಬಿಲ್ಲನ್ನು (Short Claim) ಗ್ರಾಹಕರಿಗೆ ಜಾರಿ ಮಾಡಿರುವುದು ಹಾಗೂ ಹೆಚ್.ಟಿ. ಬಿಲ್ಲನ್ನು ಸಂಬಂಧಿಸಿದ ಹೆಸ್ಕಾಂ., ವಿಭಾಗ ಕಛೇರಿ, ಹೆಸ್ಕಾಂ., ಆಂತರಿಕ ಪರಿಶೋಧನೆ, ಹೆಚ್.ಟಿ.ಎಂ.ಆರ್. ಹೆಸ್ಕಾಂ., ಉಪವಿಭಾಗ ಶಿರಸಿ, ಮತ್ತು ಹೆಚ್.ಟಿ.ಸೆಲ್, ಹೆಸ್ಕಾಂ., ನಿಗಮ ಕಛೇರಿ, ಹುಬ್ಬಳ್ಳಿ ಇವರಿಗೆ ಕಳುಹಿಸಿರುವ ಬಗ್ಗೆ ಹೆಸ್ಕಾಂ., ಭಟ್ಕಳ ಉಪವಿಭಾಗದ ಹಿರಿಯ ಸಹಾಯಕ (ಪ್ರಭಾರ) ಶ್ರೀ ಶ್ರೀಧರ ಗೊಂಡ, ರವರು ವೇದಿಕೆಯಲ್ಲಿ ತಿಳಿಸಿರುವುದು ಮನವರಿಕೆಯಾಗಿರುತ್ತದೆ.

**19)** ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಕಾರ್ಯ & ಪಾಲನಾ ಉಪವಿಭಾಗ ಹೆಸ್ಕಾಂ., ಭಟ್ಕಳ ರವರು HT-9 ಸ್ಥಾವರದ ಪ್ರಕರಣಕ್ಕೆ ಸಂಬಂದಿಸಿದಂತೆ **ಅಂತಿಮ ಅಂಶವಾರು ಲಿಖಿತ ಹೇಳಿಕೆ** ಪತ್ರವನ್ನು ದಿನಾಂಕ 29.05.2019 ರಂದು ಸಭೆಯ ಅಧ್ಯಕ್ಷರವರಲ್ಲಿ ಸಲ್ಲಿಸಿರುವುದರಿಂದ ಅವುಗಳ ವಿವರ ಈ ಕೆಳಗಿನಂತಿರುವುದು ಗಮನಿಸಲಾಗಿದೆ.

1) ದಿನಾಂಕ 26.12.2018 ರಂದು *HT-9* ಸ್ಥಾವರವನ್ನು ಹೆಚ್.ಟಿ.ಎಂ.ಆರ್. ಉಪವಿಭಾಗ ಹೆಸ್ಕಾಂ., ಶಿರಸಿ ರವರು ಪರೀಕ್ಷಿಸಲಾಗಿ,- ಸ್ಥಾವರಕ್ಕೆ ಮಾಡಿದ CT ವೈರಿಂಗ್ ಕನೆಕ್ಷನ್ ತಪ್ಪಾಗಿದ್ದುದು ಕಂಡುಬಂದಿತು. ಅಂದರೆ, CT ಯ 1S1 ಟರ್ಮಿನಲ್‌ನಿಂದ 2 ವೈಯರ್ ಬಂದಿದ್ದು ಅವುಗಳು ಮೇನ್ ಮತ್ತು ಚೆಕ್ ಮೀಟರ್‌ಗೆ ಪ್ಯಾರಲಲ್ ಆಗಿ ವೈರಿಂಗ್ ಮಾಡಿದ್ದು ಕಂಡು ಬಂದಿದ್ದು ಇರುತ್ತದೆ. ಈ ಎರಡು ಮಾಪಕಗಳು ಪ್ಯಾರಲಲ್ ಆಗಿದ್ದರಿಂದ CT ಯಿಂದ ಬಂದಂತ ವಿದ್ಯುತ್ ವಾಹಕವು ಡಿವೈಡ್ ಆಗಿ ಅರ್ಧ ಮೇನ್ ಮೀಟರ್‌ಗೆ ಇನ್ನರ್ಧ ಚೆಕ್ ಮೀಟರ್‌ಗೆ ಹೋಗುತ್ತಿತ್ತು. ಈ ವಿಷಯವನ್ನು ಎಲ್ಲರ ಸಮ್ಮುಖದಲ್ಲಿ ಹಾಜರಿದ್ದಂತ ಬಳಕೆದಾರರ ಪ್ರತಿನಿಧಿಯಾದ ಶ್ರೀ ನಾಗರಾಜ ಶೆಟ್ಟಿ ಮತ್ತು ಶ್ರೀ ಭಾಸ್ಕರ ಕಲ್ಮನೆ ಇವರಿಗೂ ಮನವರಿಕೆಮಾಡಿಕೊಡಲಾಯಿತು.

2) ಸದರೀ ವೈರಿಂಗ್‌ನಲ್ಲಿ ಆದ ತಪ್ಪಿನಲ್ಲಿ ನಮ್ಮ ಪಾತ್ರ ಏನೂ ಇರುವುದಿಲ್ಲ. ಆದ್ದರಿಂದ ಸದರೀ ವೈರಿಂಗ್‌ನಲ್ಲಿ ಆದಂತಹ ತಪ್ಪನ್ನು ಸರಿ ಮಾಡಿಕೊಡಬೇಕೆಂದು ಗ್ರಾಹಕರ ಪ್ರತಿನಿಧಿಯಾದ ಶ್ರೀ ನಾಗರಾಜ ಶೆಟ್ಟಿ ಮತ್ತು ಶ್ರೀ ಭಾಸ್ಕರ ಕಲ್ಮನೆ ವಿನಂತಿಸಿಕೊಂಡರು. ಗ್ರಾಹಕರ ವಿನಂತಿಗನುಸಾರವಾಗಿ ಸದರಿ CT ವೈರಿಂಗ್‌ನಲ್ಲಿ ಆದಂತಹ ತಪ್ಪನ್ನು ಸರಿ ಮಾಡಿ

ಕೊಡಲಾಯಿತು. ನಂತರ ಮಹಜರ್ ಮಾಡಲಾಯಿತು. ಮಹಜರ್‌ನಲ್ಲಿ ಗ್ರಾಹಕರು BBCಯನ್ನು ತುಂಬಬೇಕಾಗುತ್ತದೆ ಎಂದು ನಮೂದಿಸಲಾಯಿತು. ಅದಕ್ಕೆ ಬಳಕೆದಾರರ ಪ್ರತಿನಿಧಿಯಾದ ಶ್ರೀ ನಾಗರಾಜ ಶೆಟ್ಟಿ ಮತ್ತು ಶ್ರೀ ಭಾಸ್ಕರ ಕಲ್ಮನೆ ಇವರು ಸದರೀ ವೈರಿಂಗ್‌ನಲ್ಲಿ ಆದ ತಪ್ಪಿನಲ್ಲಿ ನಮ್ಮ ಪಾತ್ರ ಏನೂ ಇರುವುದಿಲ್ಲ. ಆದ್ದರಿಂದ BBCಯನ್ನು ತುಂಬಲಿಕ್ಕೆ ನಮ್ಮ ಆಕ್ಷೇಪಣೆ ಇರುವುದುಎಂದು ಮಹಜರ್‌ಗೆ ಸಹಿ ಮಾಡಲು ನಿರಾಕರಿಸಿದರು. ಸದರಿ ಅಂಶವನ್ನು ಮಹಜರ್‌ನಲ್ಲೂ ನಮೂದಿಸಲಾಗಿರುತ್ತದೆ.

3) ದಿನಾಂಕ 29.04.2014 ರಂದು HT-9 ಸ್ಥಾವರಕ್ಕೆ CT ವೈರಿಂಗ್ ಕನೆಕ್ಷನ್‌ವನ್ನು Dual ratio ದಿಂದ Single ratio ಗೆ ಮಾಡಿದ್ದು ಇರುತ್ತದೆ. ಈ ರೀತಿ ಕನೆಕ್ಷನ್ ಮಾಡುವಾಗ ಅಚಾನಕ್‌ವಾಗಿ ಕಣ್–ತಪ್ಪಿನಿಂದ ಸಿರೀಸ್ ಕನೆಕ್ಷನ್ ಆಗುವ ಬದಲಾಗಿ ಪ್ಯಾರಲಲ್ ಕನೆಕ್ಷನ್ ಆಗಿರುತ್ತದೆ. CT ವೈರಿಂಗ್ ಕನೆಕ್ಷನ್ ಬಗ್ಗೆ ನನಗೆ ಹೇಗೆ ಮಾಡಬೇಕೆಂದು ಅಂದು ಗೊತ್ತಿರಲ್ಲಿಲ್ಲ. ಅದೇ ಮೊದಲ ಬಾರಿಗೆ ಆಗಿತ್ತು ಎಂದು ಶ್ರೀ ವಿ.ಐ.ಭಟ್ಟ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಹೆಚ್.ಟಿ.ಎಂ.ಆರ್. ಉಪವಿಭಾಗ ಹೆಸ್ಕಾಂ., ಶಿರಸಿಯ ರವರು ತಿಳಿಸಿರುತ್ತಾರೆ.

4)ಹೆಚ್.ಟಿ.ಎಂ.ಆರ್. ಉಪವಿಭಾಗ ಹೆಸ್ಕಾಂ., ಶಿರಸಿಯಲ್ಲಿ ಕಾರ್ಯನಿರ್ವಹಿಸಿದಂತಹ ಶ್ರೀ ಗಣಪತಿ ಹುಬ್ಬಳ್ಳಿಕರ್, ಮಾರ್ಗದಾಳು ಇವರು ದಿನಾಂಕ 24.03.2014 ರಂದು HT-9 ಸ್ಥಾವರದ ಹೆಚ್.ಟಿ ಕ್ಯುಬಿಕಲ್ ಕ್ಯಾಲಿಬಿರೇಷನ್ ಮಾಡಿ 3 CT 3 PT Wiring connection ಮಾಡಿದ್ದು ಇರುತ್ತದೆ. ಅಲ್ಲದೇ ಅಂದು ಮಾಡಿದ Wiring connection ಸರಿಯಾಗಿಯೇ ಇತ್ತು. ಪುನಃ ದಿನಾಂಕ 29.04.2014 ರಂದು HT-9 ಸ್ಥಾವರಕ್ಕೆ ರೇಟಿಂಗ್ ಮಾಡಿ ವೈರಿಂಗ್ ಬದಲಾವಣೆ ಮಾಡಿದರು. ಆದರೆ ಅವುಗಳ ಯಾಕೆ ಬದಲಾವಣೆ ಮಾಡಿದರು ಎಂಬ ನಿಖರವಾದ ಅಂಶವನ್ನು ತನಗೆ ತಿಳಿದಿರುವುದಿಲ್ಲಾ ಎಂದು ಸ್ಪಷ್ಟವಾಗಿ ತಿಳಿಸಿದರು.

5)HT-9 ಸ್ಥಾವರದ ಬೇಡಿಕೆ ಪ್ರಮಾಣ ಎಪ್ರೀಲ್–2014 ರಂದು 281 ಇದ್ದು ಮೇ–2014 ತಿಂಗಳಲ್ಲಿ ಕಡಿಮೆಯಾಗಿ 146 ಆಗಿರುತ್ತದೆ. ಅದರಂತೆ ಸದರಿ ಸ್ಥಾವರದಲ್ಲಿ ದಾಖಲಾಗಿರುವ ವಿದ್ಯುತ್

ಬಳಕೆ ಪ್ರಮಾಣವು ಎಪ್ರೀಲ್-2014 ತಿಂಗಳಲ್ಲಿ 81435 ಇದ್ದು ಮೇ-2014 ತಿಂಗಳಲ್ಲಿ ಕಡಿಮೆಯಾಗಿ 52455 ಆಗಿರುತ್ತದೆ.

6)HT-9 ಸ್ಥಾವರದ ಬೇಡಿಕೆ ಪ್ರಮಾಣ ನವಂಬರ್-2018 ರಂದು 144 ಇದ್ದು ಡಿಸೆಂಬರ್-2018 ತಿಂಗಳಲ್ಲಿ ಹೆಚ್ಚಿಗೆಯಾಗಿ 302ಆಗಿರುತ್ತದೆ. ಅದರಂತೆ ಸದರಿ ಸ್ಥಾವರದಲ್ಲಿ ದಾಖಲಾಗಿರುವವಿದ್ಯುತ್ ಬಳಕೆ ಪ್ರಮಾಣವು ಡಿಸೆಂಬರ್-2018 ತಿಂಗಳಲ್ಲಿ 56415 ಇದ್ದು ಜನೆವರಿ-2019 ತಿಂಗಳಲ್ಲಿ ಹೆಚ್ಚಿಗೆಯಾಗಿ 72090 ಆಗಿರುತ್ತದೆ.

7)ಈ ಎಲ್ಲಾ ಮೇಲಿನ ಅಂಶಗಳನ್ನು ಅವಲೋಕಿಸಿ ಹಾಗೂ ಮಹಜರ ವರದಿಯನ್ನು Condition of supply of Electricity of Distribution Licensees in the State of Karnataka ನಿಯಮ **29.03** ರಂತೆ, Supplimental Claims ಅಂಶವನ್ನು ಪರಿಗಣಿಸಿ ಕ್ರಮ ಕೈಗೊಂಡು ದಿನಾಂಕ 29.04.2014 ರಿಂದ 26.04.2018 ರವರೆಗೆ ಹಿಂಬಾಕಿ ಮೊತ್ತ ಭರಣ ಮಾಡುವಂತೆ ಕೈಗೊಂಡ ಕ್ರಮ ಸರಿಯಾಗಿರುತ್ತದೆ.

8)ಆದ್ದರಿಂದ, ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಹೆಚ್.ಟಿ.ಎಂ.ಆರ್. ಉಪವಿಭಾಗ ಹೆಸ್ಕಾಂ., ಶಿರಸಿಯ ರವರು ಮಾಡಿದ್ದ ತಪ್ಪು ವೈರಿಂಗ್ ಅವಧಿಯಲ್ಲಿ ಕೇವಲ 50% ವಿದ್ಯುತ್ ಬಳಕೆಗೆ ಮಾತ್ರ ಬಿಲ್ಲು ನೀಡಲಾಗಿದ್ದು ಇನ್ನುಳಿದ 50% ವಿದ್ಯುತ್ ಬಳಕೆಗೆ ಈಗ Supplimental Claims ಅಂಶವನ್ನು ಪರಿಗಣಿಸಿ ಕ್ರಮ ಕೈಗೊಂಡು ದಿನಾಂಕ 29.04.2014 ರಿಂದ 26.04.2018 ರವರೆಗೆ ಹಿಂಬಾಕಿ ಮೊತ್ತ ಭರಣ ಮಾಡುವಂತೆ ಬಿಲ್ಲು ನೀಡಲಾಗಿರುತ್ತದೆ. ಸದರೀ ಬಿಲ್ಲನ್ನು ಗ್ರಾಹಕರು ಭರಣ ಮಾಡುವಂತೆ ಆದೇಶಿಸಲು ವಿನಂತಿಸಲಾಗಿದೆ.

**ಆದ್ದರಿಂದ ಪ್ರಕರಣದ ಕುರಿತು ಈ ಮೇಲಿನ ಒಟ್ಟೂ ಅಂಶವಾರು ಘಟನಾವಳಿಯನ್ನು ಅವಲೋಕಿಸಲಾಗಿ ಈ ಕೆಳಗಿನಂತೆ ಅಭಿಪ್ರಾಯ ನೀಡಬಹುದಾಗಿರುತ್ತದೆ.**

ನಿರ್ದೇಶಕರು, ನವೀನ ಹೋಟೆಲ್, ಸಾ॥ ಮುರ್ಡೇಶ್ವರ, ತಾ॥ ಭಟ್ಕಳ ರವರ ಸ್ಥಾವರ ಸಂಖ್ಯೆ: HT-9 ಕ್ಕೆ ವಿದ್ಯುತ್ ಮಂಜೂರಾತಿಯಾಗಿದ್ದು 200 KVA ದಿನಾಂಕ

27.03.2001. ನಂತರದಲ್ಲಿ 200 ರಿಂದ 300 KVA ಬದಲಾಗಿದ್ದು 19.03.2009. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಹೆಚ್.ಟಿ.ಎಮ್.ಆರ್. ಉಪವಿಭಾಗ, ಹುವಿಸಕಂನಿ., ಶಿರಸಿ ರವರು ದಿನಾಂಕ 29.04.2014 ರ ರೇಟಿಂಗ್ ವರದಿಯಲ್ಲಿ "Re-arrangement of CT/PT's Ratio with equal of from dual ratio to single ratio as information given of the EE(EL) M.T. Division, HESCOM, Hubli on 25.04.2014" ಎಂದು ಸ್ಪಷ್ಟವಾಗಿ ವರದಿ ಮಾಡಿರುವುದು, ಅದಕ್ಕೆ ಶ್ರೀ ರಾಮು ಭಟ್ಟ ಎಂಬ ದೂರುದಾರರ ಪ್ರತಿನಿಧಿಯು ಸಹಿಯನ್ನು ಪಡೆದುಕೊಂಡಿದ್ದು, **ಪ್ಯಾರಲಲ್** ಆಗಿ ಲೈನ್ ಸಿಟಿಗಳ ಕೋರ್–1 ಕ್ಕೆ **ತಪ್ಪಾಗಿ ವೈರಿಂಗ್ ಕನೆಕ್ಷನ್ ಮಾಡಿದ್ದರಿಂದ** ಸಿಟಿಗಳ ಸೆಕೆಂಡರಿ ಕೋರ್ 1 ರಿಂದ ಒಳ ಬರುವ ಪೂರ್ಣ ಪ್ರಮಾಣದ ಲೋಡ್ ಕರೆಂಟ್ ಸದರಿ ಈ **ಎರಡೂ ಮಾಪಕಗಳಲ್ಲಿ ವಿಭಾಗವಾಗುತ್ತಾ ಹೊದಂತೆ** ಕೇವಲ 50 **ಪ್ರತಿಶತ ಯುನಿಟ್‌ಗಳು ಮೇನ್ ಮೀಟರಿನಲ್ಲಿ ದಾಖಲಾಗುತ್ತಿದ್ದು ಇನ್ನೂಳಿದ 50 ಪ್ರತಿಶತ ಯುನಿಟ್‌ಗಳು ಚೆಕ್ ಮೀಟರಿನಲ್ಲಿ ದಾಖಲಾಗುತಿತ್ತು.** ತದನಂರದ ಅವಧಿಯಲ್ಲಿಯೂ ಸಂಬಂಧಿಸಿದ ಅಧಿಕಾರಿಯವರು ಅನೇಕ ಬಾರಿ ಸದರಿ ಸ್ಥಾವರ HT Rating ಮಾಡಿದಾಗ್ಯೂ ಸಹ ಎರಡೂ ಮಾಪಕಗಳ ನಡುವಿನ ವೈರಿಂಗ್ ಕನೆಕ್ಷನ್ ಆ ಸಂದರ್ಭದಲ್ಲಿ ಕುಲಂಕುಶವಾಗಿ ಪರಿಶೀಲಿಸುವ ಸಂದರ್ಭ ಮತ್ತು ಸನ್ನಿವೇಶಗಳು ಬರದೇ ಇರುವುದರಿಂದ ಅವುಗಳಲ್ಲಿರುವ ನೂನ್ಯತೆಯನ್ನು ತಕ್ಷಣ ಕಂಡುಹಿಡಿಯದೇ ಇರುವುದು ಮತ್ತು ಈ ದೋಷ ದಿನಾಂಕ 26.12.2018 ರಂದು HT-9 ಸ್ಥಾವರ ಪರಿಶೀಲಿಸಿದಾಗ ಈ ಹಿಂದೆ ದಿನಾಂಕ 29.04.2014 ರಂದು ತಪ್ಪಾಗಿ **ಪ್ಯಾರಲಲ್ ವೈರಿಂಗ್ ಕನೆಕ್ಷನ್ ಮಾಡಿದನ್ನು ಸಿರೀಸ್ ಆಗಿ** ಜೋಡಿಸಿ ಸರಿ ಮಾಡಿರುತ್ತಾರೆ. ಈ ಅಂಶವು ಮನದಟ್ಟಾಗಿರುತ್ತದೆ.

ಈ ತೆರನಾದ ಪ್ರಕಿಯೆಯಿಂದ ದಿನಾಂಕ 29.04.2014 ರ **ಪೂರ್ವದಲ್ಲಿ** ಶೇ 100 ರಷ್ಟು ಬಿಲ್ಲನ್ನು ಗ್ರಾಹಕರು ಭರಣ ಮಾಡಿರುವುದು, ತದನಂತರದ ಅವಧಿ ಅಂದರೆ, ದಿನಾಂಕ 29.04.2014 ರಿಂದ 26.12.2018 ರ ವರೆಗಿನದು ಸರಿಸುಮಾರು 4 **ವರ್ಷ** 8 **ತಿಂಗಳು** ಗ್ರಾಹಕರಿಗೆ ಮಾಸಿಕವಾಗಿ ಕೇವಲ ಶೇ. 50 ರಷ್ಟು ಬಿಲ್ ಮಾತ್ರ ಜಾರಿಯಾಗಿರುವುದು

ಮತ್ತು ಇನ್ನುಳಿದ ಶೇ. 50 ರಷ್ಟು ಬಿಲ್ಲನ್ನು ಆ ಅವಧಿಯಲ್ಲಿ ಜಾರಿಯಾಗದೇ ಇರುವುದು ಸಹ ಮನದಟ್ಟಾಗಿರುತ್ತದೆ.

ದಿನಾಂಕ 26.12.2018 ರಂದು **HT-9** ರ ಸ್ಥಾವರಕ್ಕೆ HT Rating ಮಾಡಿ ಪರಿಶೀಲಿಸಿ ಪ್ರಕಾರ ತಪ್ಪಾಗಿ ವೈರಿಂಗ್ ಕನೆಕ್ಷನ್ ಮಾಡಿದ್ದರ ಕಾರಣದಿಂದ ಸದರಿ ಮೀಟರ್‌ನಲ್ಲಿ ಶೇ 50 ರಷ್ಟು ವಿದ್ಯುತ್ ಬಳಕೆ ಕಡಿಮೆ ಆಗುತ್ತಿರುವುದು ಕಂಡುಬಂದಿದ್ದು **ಕಂಪನಿ ನಿಯಮಾನುಸಾರ ಹಿಂಬಾಕಿ ಬಿಲ್ ಮಾಡುವಂತೆ** ಧೃಡೀಕರಿಸಿ **Rating** ವರದಿ ಮತ್ತು **ಮಹಜರ** ವರದಿಯಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಕಾರ್ಯ ಮತ್ತು ಪಾಲನಾ ಉಪವಿಭಾಗ, ಹುವಿಸಕಂನಿ ಭಟ್ಕಳ ರವರು **ಎಪ್ರಿಲ್–2014** ರಿಂದ **ಡಿಸೆಂಬರ–2018** ರ ತಿಂಗಳ ವರೆಗಿನ ತಾತ್ಕಾಲಿಕ ಬಿಲ್ಲಿನ (Short Claim) ವ್ಯತ್ಯಾಸದ ಮೊತ್ತ ರೂ. 1,81,88,063.00 ವನ್ನು 15 ದಿನದಲ್ಲಿ ಪಾವತಿಸಿ ಕಂಪನಿಗೆ ಸಹಕರಿಸುವಂತೆ ಶ್ರೀ ಆರ್.ಎನ್.ಶೆಟ್ಟಿ, ನವೀನ ಹೋಟೆಲ್, ಸಾ॥ ಮುರ್ಡೇಶ್ವರ ಇವರಿಗೆ ಪತ್ರ ಬರೆದಿರುವುದು ಹಾಗೂ ಬಿಲ್ಲಿನ ವ್ಯತ್ಯಾಸದ ಮೊತ್ತ ರೂ. 1,81,88,063.00 ವನ್ನು 15 ದಿನದೊಳಗಾಗಿ ಭರಣ ಮಾಡುವುದು, ತಪ್ಪಿದಲ್ಲಿ ಸದರಿ ಸ್ಥಾವರದ ವಿದ್ಯುತ್ ಕಡಿತಗೊಳಿಸುವುದೆಂದು ಆದೇಶ ಹೊರಡಿಸಿರುವುದು ಸಹ ಮನದಟ್ಟಾಗಿರುತ್ತದೆ.

ಈ ನಿಟ್ಟಿನಲ್ಲಿ ದೂರುದಾರರು ದಿನಾಂಕ: 12.03.2019 ರಲ್ಲಿ ಎಪ್ರಿಲ್–2014 ರಿಂದ **ಡಿಸೆಂಬರ**–2018 ರ ತಿಂಗಳ ವರೆಗಿನ ತಾತ್ಕಾಲಿಕ ಬಿಲ್ಲಿನ (Short Claim) ವ್ಯತ್ಯಾಸದ ಮೊತ್ತ ರೂ. 1,81,88,063.00 ವನ್ನು ಭರಣ ಮಾಡಲು ಆಕ್ಷೇಪಿಸಿರುವುದರಿಂದ ಸಿ.ಜಿ.ಆರ್.ಎಫ್. ಗೆ ಮನವಿ ಸಲ್ಲಿಸಿರುವ ಅಂಶದಡಿಯಲ್ಲಿ ಸದರಿ ಗ್ರಾಹಕರ ಕುಂದು ಕೊರತೆ ನಿವಾರಣೆ ಮಾಡುವ ಹಿತದೃಷ್ಟಿಯಿಂದ ಸುಮಾರು 5 ಬಾರಿ ಸಭೆ ಜರುಗಿಸಲಾಗಿ, ಸಭೆಯಲ್ಲಿ ಕೋರಿರುವ ಗ್ರಾಹಕರ ಆಕ್ಷೇಪಣೆಯನುಸಾರ– ಸಂಭಂದಿಸಿದ ಅಧಿಕಾರಿ, ನೌಕರರು ಮತ್ತು ದೂರುದಾರರ ಪ್ರತಿನಿಧಿಯವರು ಉತ್ತರಿಸಿರುವುದು ಮನದಟ್ಟಾಗಿರುತ್ತದೆ. ಅಲ್ಲದೇ, ಗ್ರಾಹಕರಿಗೆ

ಮನದಟ್ಟಾಗುವಂತೆ ಸ್ಥಾವರ ಸಂಖ್ಯೆ: HT-9 ರ ಮಾಪಕದ CT,PT Connections, Main Meter ಮತ್ತು Check Meter ಗಳ ಕಾರ್ಯವಿಧಾನದ ಕುರಿತು **ಪ್ರೊಜೆಕ್ಟರ್ ಮೂಲಕ ಪವರ್‌ಪಾಯಿಂಟ್**‌ನಲ್ಲಿ ಸಹಾಯಕ ಇಂಜಿನೀಯರ್(ವಿ), ಹೆಚ್.ಟಿ.ಎಮ್.ಆರ್. ಉಪವಿಭಾಗ, ಹೆಸ್ಕಾಂ., ಶಿರಸಿ ರವರು ಸಹ ಸಭೆಯಲ್ಲಿ ಸವಿಸ್ತಾರವಾಗಿ ತಿಳಿಸಿರುತ್ತಾರೆ.

**ಆದರೆ, ಪವರ್‌ಪಾಯಿಂಟ್ ವೀಕ್ಷಣೆ ಮಾಡಿದಾಗ ಸದರಿ ಸ್ಥಾವರದ ಮೇನ್ ಮೀಟರ್ ಬಿಲ್ಲಿಂಗ್ ಮೀಟರ್ ಆಗಿದ್ದು, ಸ್ಥಾವರದ ವೈರಿಂಗ್ ಸರಿ ಮಾಡಿದ ದಿನಾಂಕ 26.12.2018 ರ ನಂತರದಿಂದ ಇದುವರೆಗೆ ಮಾಪಕದಲ್ಲಿ ದಾಖಲಾಗುತ್ತಿರುವ ವಿದ್ಯುತ್ ಬೇಡಿಕೆ ಪ್ರಮಾಣವು, ಈ ಹಿಂದಿನ ಅವದಿಯಲ್ಲಿನ ಅಂದರೆ, ದಿನಾಂಕ 19.03.2009 ರಿಂದ ದಿನಾಂಕ 29.04.2014 ರ ಅವಧಿಯ ವರೆಗಿನ ದಾಖಲಾಗಿದ್ದ ವಿದ್ಯುತ್ ಬೇಡಿಕೆಯ ಪ್ರಮಾಣಕ್ಕೆ ಸರಿಸಮಾನವಾಗಿ ತಾಳೆಹೊಂದಿದ್ದನ್ನು ವೀಕ್ಷಿಸಲಾಗಿರುತ್ತದೆ ಮತ್ತು ದಿನಾಂಕ 29.04.2014 ರಂದು ಸ್ಥಾವರದಲ್ಲಿ ತಪ್ಪಾಗಿ ವೈರಿಂಗ್ ಕನೆಕ್ಷನ್ ಮಾಡಿದ್ದರ ಕಾರಣದಿಂದಾಗಿ ದಿನಾಂಕ 29.04.2014 ರಿಂದ ದಿನಾಂಕ 26.12.2018 ರ ಅವಧಿಯವರೆಗೆ ಪ್ರತಿಶತ 50 ರಷ್ಟು ವಿದ್ಯುತ್ ಬೇಡಿಕೆ ಪ್ರಮಾಣವು ಕಡಿಮೆ ದಾಖಲಾಗಿರುವುದು ಸಹ ಅತೀ ಸ್ಪಷ್ಟವಾಗಿ ಕಂಡುಬಂದಿದ್ದು ಇರುತ್ತದೆ.**

ಆದಾಗ್ಯೂ, ಸದರಿ ಪ್ರಕರಣದ ಬಗ್ಗೆ ಕುಲಂಕುಶವಾಗಿ ಅವಲೋಕಿಸಿದಲ್ಲಿ ಶ್ರೀ ವಿ.ಐ.ಭಟ್ಟ, ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಹೆಚ್.ಟಿ.ಎಂ.ಆರ್. ಉಪವಿಭಾಗ ಹೆಸ್ಕಾಂ., ಶಿರಸಿ ರವರ ಕರ್ತವ್ಯದ ನಿಷ್ಠೆ ಅತೀ ಮುಖ್ಯವಾಗಿದ್ದರು ಸಹಿತ ಅದನ್ನು ಲೆಕ್ಕಿಸದೇ ದಿನಾಂಕ 29.04.2014 ರಂದು HT-9 ಸ್ಥಾವರಕ್ಕೆ CT/PT Wiring connection ವನ್ನು ಡ್ಯೂಯೋಲ್ ರೇಷ್ಯೂ ದಿಂದ ಸಿಂಗಲ್ ರೇಷ್ಯೂಗೆ ಕನೆಕ್ಷನ್ ಮಾಡುವ ಪೂರ್ವದಲ್ಲಿ ಅಂದಿನ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಎಂ.ಟಿ.ವಿಭಾಗ, ಹೆಸ್ಕಾಂ., ಹುಬ್ಬಳ್ಳಿ ರವರ ಮೌಖಿಕ ಅದೇಶದನುಸಾರ ಕ್ರಮಕೈಗೊಂಡಿದ್ದರೂ ಸಹಿತ ರೇಟಿಂಗ್ ವರದಿಯನ್ನು ಮಾತ್ರ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಎಂ.ಟಿ.ವಿಭಾಗ, ಹೆಸ್ಕಾಂ., ಹುಬ್ಬಳ್ಳಿ ರವರಿಗೆ ಸಲ್ಲಿಸದೇ ಇರುವುದು, ಚೆಕ್ ಮೀಟರಿಗೆ ಕನೆಕ್ಷನ್ ನೀಡುವಾಗ ಕಣ್-ತಪ್ಪಿನಿಂದ ಅಚಾನಕ್ ಆಗಿ ಸಿರೀಸ್

ಕನೆಕ್ಷನ್ ಮಾಡುವ ಬದಲಾಗಿ ಪ್ಯಾರಲಲ್ ಕನೆಕ್ಷನ್ ಆಗಿದೆ ಎಂದು ತಿಳಿಸಿರುವುದು, ಕನೆಕ್ಷನ್ ಬಗ್ಗೆ ತನಗೆ ಹೇಗೆ ಮಾಡಬೇಕೆಂದು ಅಂದು ಗೊತ್ತಿದ್ದಿಲ್ಲ ಎಂದು ತಿಳಿಸಿರುವುದು, ಇದೇ ಮೊದಲ ಬಾರಿಗೆ ಆಗಿರುವುದು ಮತ್ತು ಸದರಿ ಸ್ಥಾವರಕ್ಕೆ ಯಾವುದೇ ದೂರು ಬರದೇ ಇದ್ದುದರಿಂದ ಮಾಡಿದ ತಪ್ಪನ್ನು ಸರಿಪಡಿಸಲು ಒಂದೂ ಅವಕಾಶ ತನಗೆ ದೊರಕಿರುವುದಿಲ್ಲ ಎಂದು ತಿಳಿಸಿರುವುದು ಹಾಗೂ ಸದರಿ ತಪ್ಪನ್ನು ಯಾವುದೇ ಉದ್ದೇಶಪೂರ್ವಕವಾಗಲಿ ಅಥವಾ ಕಂಪನಿಗೆ ಹಾನಿ ಮಾಡುವುದಾಗಲಿ ಮಾಡಿರುವುದಿಲ್ಲ, ತನ್ನ ಕಾರ್ಯನಿರ್ವಹಣೆಯಲ್ಲಿ ಬೇಜವಾಬ್ದಾರಿತನ, ನಿರ್ಲಕ್ಷತನದಿಂದ ತಪ್ಪಾಗಿರುವುದು ಹೌದು ಮತ್ತು ತನ್ನ ಜೊತೆಯಲ್ಲಿ ಬಂದಂತ ಶ್ರೀ ವಿ.ವಿ.ಮುಗಳಿ, ಯಂತ್ರಕರ್ಮಿ ದರ್ಜೆ-2 ಹಾಗೂ ಶ್ರೀ ಗಣಪತಿ ಹುಬ್ಬಳ್ಳಿಕರ ಮಾರ್ಗದಾಳು ಇವರಿಗೂ ಸಹ ವೈರಿಂಗ್ ಕನೆಕ್ಷನ್ ಬಗ್ಗೆ ಹೆಚ್ಚಿನ ಸರಿಯಾದ ಜ್ಞಾನ ಇರುವುದಿಲ್ಲ ಎಂಬುದನ್ನು ತಿಳಿಯಪಡಿಸಿರುವುದನ್ನು ಅವಲೋಕಿಸಿದಲ್ಲಿ ಸದರಿಯರು ಕಾರ್ಯ ನಿರ್ವಹಣೆ ಕೈಗೊಳ್ಳುವಲ್ಲಿ ಬೇಜವಾಬ್ದಾರಿತನ ಮತ್ತು ನಿರ್ಲಕ್ಷತನ ಹೊಂದಿರುವುದಾಗಿ ತಿಳಿದು ಬಂದಿರುತ್ತದೆ ಮತ್ತು ಕಂಪನಿಗೆ ಆರ್ಥಿಕ ನಷ್ಟ ಉಂಟು ಮಾಡಿರುವುದನ್ನು ಸಹ ವೇದ್ಯವಾಗಿರುತ್ತದೆ.

ಆದರೆ, ಕ್ಯಾಲಿಬ್ರೇಷನ್ ವರದಿಯನ್ನು ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಎಂ.ಟಿ.ವಿಭಾಗ, ಹೆಸ್ಕಾಂ., ಹುಬ್ಬಳ್ಳಿ ರವರಿಗೆ ಅಂದು ಕಳುಹಿಸಿದಲ್ಲಿ ತಪ್ಪಾದ ವೈರಿಂಗ್ ಕನೆಕ್ಷನ್ ಬಗ್ಗೆ ತಿಳಿಯಬಹುದಾಗಿತ್ತು. ಅ ಕ್ರಮವನ್ನು ಶ್ರೀ ವಿ.ಐ.ಭಟ್ಟ, ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಹೆಚ್.ಟಿ.ಎಂ.ಆರ್. ಉಪವಿಭಾಗ ಹೆಸ್ಕಾಂ., ಶಿರಸಿ ರವರು ಅನುಸರಿಸಿರುವುದಿಲ್ಲ ಮತ್ತು ಪ್ರಕರಣದ ಕುರಿತು ಆ ಅವಧಿಯಲ್ಲಿ **ಮಹಜರ ಮಾಡಿದ** ವರದಿಯ ದಾಖಲೆಯನ್ನು ಸಹ ಇಟ್ಟಿರುವುದಿಲ್ಲ. ಈ ತರಹದ ನಿರ್ಲಕ್ಷತನ ಸದರಿಯವರು ಹೆಚ್.ಟಿ.ಎಂ.ಆರ್. ಉಪವಿಭಾಗ ಹೆಸ್ಕಾಂ., ಶಿರಸಿಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಹುದ್ದೆಗೆ ಹಾಜರಾಗಿದ್ದಾಗಿನಿಂದ ಇದ್ದಿದ್ದಾಗಿರುವುದು ತಿಳಿದುಬಂದಿರುತ್ತದೆ.

ಸದರಿ ಸ್ಥಾವರಕ್ಕೆ ಹೆಚ್.ಟಿ. ಮೀಟರ್ ಕ್ಯಾಲಿಬ್ರೇಷನ್ ಮಾಡುವಾಗ ಅನೇಕ ಸಲ ಸಿಟಿ ಪಿಟಿ ಸೀಲ್ ಓಪನ್ ಮಾಡಿರುವುದು, ತದನಂತರದಲ್ಲಿ ಸೀಲನ್ನು ಮೀಟರ್ ಗೆ ಅಳವಡಿಸಿದ್ದು ಈ ಬಗ್ಗೆ **ಸ್ಥಳದಲ್ಲಿ ಮಹಜರ ಮಾಡಿದ ಯಾವುದೇ ನಿಯಮಾವಳಿಯನ್ನು** ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಕಾರ್ಯ ಮತ್ತು ಪಾಲನಾ ಉಪವಿಭಾಗ, ಹೆಸ್ಕಾಂ.,

ಭಟ್ಕಳ, ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಹೆಚ್.ಟಿ.ಎಂ.ಆರ್. ಉಪವಿಭಾಗ ಹೆಸ್ಕಾಂ., ಶಿರಸಿ, ರವರು ಅನುಸರಿಸಿರುವುದಿಲ್ಲ ಮತ್ತು ಈ ಕುರಿತು ಸರಿಯಾದ ದಾಖಲೆಗಳನ್ನು ಸಹ ಇಡದೇ ಇರುವುದು ವೇದಿಕೆಯ ವಿಚಾರಣಾ ವೇಳೆಯಲ್ಲಿ ತಿಳಿದುಬಂದಿರುತ್ತದೆ.

ಅಲ್ಲದೇ, 2014 ರ ಅವಧಿಯ ಮುಂಚೆ ಮತ್ತು 2014 ರ ನಂತರ HT-9 ಸ್ಥಾವರಕ್ಕೆ Ab Normal/Sub Normal Consumption ಆಗಿರವ ಬಗ್ಗೆ ಆಗಿನ ಪ್ರಭಾರ ಹಿರಿಯ ಸಹಾಯಕರಾದ ಶ್ರೀ ಎ.ಪಿ.ನಾಯಕ, ಹೆಸ್ಕಾಂ., ಉಪವಿಭಾಗ, ಭಟ್ಕಳ ರವರು ಯಾವುದೇ ವ್ಯತ್ಯಾಸವನ್ನು ಮೇಲಾಧಿಕಾರಿಯವರ ಗಮನಕ್ಕೆ ತಂದಿರುವುದಿಲ್ಲ. ಲೆಕ್ಕಾಧಿಕಾರಿ ಆಂತರಿಕ ಪರಿಶೋಧನೆ ರವರ 2013-2014 ರ ಸಾಲಿನ ಹೆಚ್.ಟಿ. ತಪಾಷಣೆಯ ವರದಿ ನೀಡಿದನ್ನು ಪರಿಶೀಲಿಸಿದಾಗಲೂ ಸಹ HT-9 ಸ್ಥಾವರದ ಬಳಕೆಯು ವ್ಯತ್ಯಾಸವಾಗಿರುವ ಬಗ್ಗೆ ವರದಿಯಲ್ಲಿ ತರಬೇಕಿತ್ತು. ಅದನ್ನು ತಂದಿರುವುದಿಲ್ಲ ಮತ್ತು ಹೆಚ್.ಟಿ. ಬಿಲ್ಲನ್ನು ಹೆಚ್.ಟಿ. ಸೆಲ್, ನಿಗಮ ಕಛೇರಿ, ಹೆಸ್ಕಾಂ., ಹುಬ್ಬಳ್ಳಿಗೆ ಕಳುಹಿಸಿರುವ ಬಗ್ಗೆಯೂ ಯಾವುದೇ ದಾಖಲೆ ಸಹ ಇಡದೇ ಇರುವುದರಿಂದ ಇಲ್ಲಿಯೂ ಸಹ ನೌಕರರ ಮತ್ತು ಅಧಿಕಾರಿಯವರ ಬೇಜವಾಬ್ದಾರಿತನ ಮತ್ತು ನಿರ್ಲಕ್ಷತನ ಕಂಡುಬಂದಿರುತ್ತದೆ.

ಹೊರತಾಗಿ, ಗ್ರಾಹಕರು ಸದರಿ ಸ್ಥಾವರವು ವಾಣಿಜ್ಯ ವ್ಯಾಪರಿಕಣವಾಗಿದ್ದರಿಂದ ಅಂದಿನ ಸ್ಥಿತಿಗನುಗುಣವಾಗಿ ವಿನಾಯತಿ, ರಿಯಾಯತಿ ನೀಡಿ ವ್ಯವಹರಿಸಿದ್ದು, ಹಾಲಿ ಸ್ಥಿತಿಯಲ್ಲಿ ಹಿಂಬಾಕಿ ಬಿಲ್ (Short Claim) ಭರಣ ಮಾಡಿಕೊಳ್ಳುವಂತೆ ಕೋರಿಕೊಂಡಿದ್ದರಿಂದ ಈ ಹಿಂದೆ ವ್ಯಾಪಾರಿಕರಣಕ್ಕೆ ಮಾಡಿಕೊಂಡ ಸೌಲತ್ತಿನ ಅನುಸಾರ ಈಗಿನ ಪರಿಸ್ಥಿತಿಯಲ್ಲಿ ನಷ್ಟ ಅನುಭವಿಸಬೇಕಾಗುತ್ತದೆ ಎಂದಿರುವುದು ಮತ್ತು Short Claim ಗೆ ನೋಟಿಸ್ ಯಾವಾಗ ಜಾರಿ ಮಾಡಿದ್ದಿರೋ ಆ ದಿನದಿಂದಲೇ ಡಿಮಾಂಡವನ್ನು ಪರಿಗಣಿಸಬೇಕೆಂದು ಕೋರಿಕೊಂಡಿರುವುದು ಒಪ್ಪಿಕೊಳ್ಳಲಾಗುವುದಿಲ್ಲ. ಏಕೆಂದರೆ, ಮೂಲತಃ HT-9 ರ ಸ್ಥಾವರಕ್ಕೆ ದಿನಾಂಕ 29.04.2014 ರಂದು ತಪ್ಪಾಗಿ ವೈರಿಂಗ್ ಕನೆಕ್ಷನ್ ಮಾಡಿದ್ದನ್ನು ದಿನಾಂಕ 26.12.2018 ರಂದು ಪರಿಶೀಲಿಸದ

ವೇಳೆಯಲ್ಲಿ ಕಂಡುಬಂದಿರುವುದರಿಂದ ದಿನಾಂಕ 29.04.2014 ರಿಂದ ದಿನಾಂಕ 26.12.2018 ರ ಅವಧಿಯವರೆಗೆ ಪ್ರತಿಶತ 50 ರಷ್ಟು ವಿದ್ಯುತ್ ಬೇಡಿಕೆ ಪ್ರಮಾಣವು ಕಡಿಮೆ ದಾಖಲಾಗಿರುವುದು ಅತೀ ಸ್ಪಷ್ಟವಾಗಿರವುದನ್ನು ಈಗಾಗಲೇ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಹೆಚ್.ಟಿ.ಎಮ್.ಆರ್, ಉಪವಿಭಾಗ, ಹೆಸ್ಕಾಂ., ಶಿರಸಿ ರವರು HT Rating ವರದಿ ಈಗಾಗಲೇ ನೀಡಿರುವ ಆಧಾರದಡಿಯಲ್ಲಿ ತಿಳಿದಿರುವುದರಿಂದಲೂ ಮತ್ತು ಪ್ರತಿಶತ 50 ರಷ್ಟು ಡಿಮಾಂಡ್ ಕಡಿಮೆಯಾಗಿವುದು ಸ್ಪಷ್ಟ ದಾಖಲೆ ಇರುವುದರಿಂದಲೂ ದಿನಾಂಕ 29.04.2014 ರಿಂದ ದಿನಾಂಕ 26.12.2018 ರ ಅವಧಿಯವರೆಗಿನ Short Claim ವನ್ನು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಕಾರ್ಯ & ಪಾಲನಾ ಉಪವಿಭಾಗ ಹೆಸ್ಕಾಂ., ಭಟ್ಕಳ ರವರು Condition of supply of Electricity of Distribution Licensees in the State of Karnataka ಅನುಛೇದ 29.03 ರಂತೆ, Supplimental Claims ಅಂಶವನ್ನು ಪರಿಗಣಿಸಿ ಹಿಂಬಾಕಿ ಮೊತ್ತ ರೂ.1,81,88,063.00 ರಷ್ಟು ಭರಣ ಮಾಡುವಂತೆ ವಿಧಿಸಿರುವುದು ಹಾಗೂ ನಿಯಮಾನುಸಾರ ಗ್ರಾಹಕರಿಗೆ 15 ದಿನಗಳ ಕಾಲವಕಾಶವನ್ನು ನೀಡಿ ನಿಗಮಕ್ಕೆ ಪಾವತಿಸುವಂತೆ ಅದೇಶ ಹೊರಡಿಸಿರುವುದು ಸರಿ ಇರುತ್ತದೆ.

**ಅಲ್ಲದೇ, ಸದರಿ ಪ್ರಕರಣವು ಸೂಕ್ಷ್ಮಾತೀತವಾಗಿ ಅವಲೋಕಿಸಿದಾಗ್ಯೂ ಸಹ ಇವು– "Erroneous Bill due to Erroneous connections"** ಆಗಿರುವುದರಿಂದ **Condition of supply of Electricity of Distribution Licensees in the State of Karnataka ಅನುಛೇದ 29.08** ರಡಿಯಲ್ಲಿ–" ***At any time during verification of the Consumer's account, if any short claims caused by erroneous billing are noticed,the Consumer is liable to pay the difference"*** ಎಂದು

ಸ್ಪಷ್ಟವಾಗಿ ತಿಳಿಸಿರುವುದರಿಂದ ಈ ಅಂಶದಡಿಯಲ್ಲಿ ಗ್ರಾಹಕರು ಹಿಂಬಾಕಿ (Short Claim) ಬಿಲ್ಲನ್ನು ನಿಗಮಕ್ಕೆ ಪಾವತಿಸಲು ಭಾದ್ಯಸ್ಥರಾಗಿರುತ್ತಾರೆ.

ಅಲ್ಲದೇ, ಸದರಿ ಪ್ರಕರಣದಂತೆ ಸಾಮ್ಯತೆ ಇರುವ ಪ್ರಕರಣವಾದ ಮೆ॥ ಪ್ಲ್ಯಾಸ್ಟೋ ಇಂಡಸ್ಟ್ರೀಸ್, ಹುಬ್ಬಳ್ಳಿ ರವರ ಪ್ರಕರಣದಲ್ಲಿ, ದಿನಾಂಕ **01.09.1992** ರಿಂದ **01.07.1993** ರ ವರೆಗೆ ದಾಖಲಾದ **12** ತಿಂಗಳ ವಿದ್ಯುತ್ ಬಳಕೆಯ ಸರಾಸರಿ ಮೇಲೆ ಮಾಪಕ **MNR** ಬಳಕೆ ಎಂದು ಕಂದಾಯ ಕೊರತೆ (**Short Claim**) ಮೊತ್ತವನ್ನು ತುಂಬುವಂತೆ ಆದೇಶಿಸಿರುವುದು– ಅದೇಶ ಸಂಖ್ಯೆ: ಅಇಂ(ವಿ)/ಉಲೆನಿ/ಹಿಸ-1/ಗ್ರಾಕುಂಕೊನಿವೇ/ಕಡತ-**211**/ಸಿವಾಯ್ಎಸ್-**271** ದಿನಾಂಕ **31.05.2017** ರಲ್ಲಿ **KERC Condition of Supply** ಅನುಛೇದ **29.08** ರ ಅನ್ವಯ ನಿಯಮಾನುಸಾರ ಸರಿ ಇರುವುದಾಗಿಯೂ ಮತ್ತು ಸದರಿ ಸ್ಥಾವರದ ಹಿಂಬಾಕಿ ಮೊತ್ತವನ್ನು ಗ್ರಾಹಕರು ಕಂಪನಿಗೆ ಪಾವತಿಸಲು ಭಾದ್ಯಸ್ಥರಾಗಿರುವುದನ್ನು ಆದೇಶಿಸಿರುವುದರಿಂದ ಗ್ರಾಹಕರು ಮಾನ್ಯ ವಿದ್ಯುತ್ ಲೋಕಪಾಲರು ಬೆಂಗಳೂರು ಇವರಲ್ಲಿ ಅಪೀಲ್ ಮಾಡಿದಾಗ್ಯೂ ಸಹ ಸದರಿ ಪ್ರಕರಣವನ್ನು ಮಾನ್ಯ ವಿದ್ಯುತ್ ಲೋಕಪಾಲರು ಬೆಂಗಳೂರು ರವರು, ಪ್ರಕಣರ ಸಂಖ್ಯೆ: **OMB/H/G-287/2017**ರಲ್ಲಿ **"Appellant's Appeal is dismissed"** ಎಂದು ಕ್ರಮ ಸಂಖ್ಯೆ: **OMB/H/G-287/2017/D-1111/2018 DT. 13.11.2018** ರಲ್ಲಿ ಆದೇಶ ಹೊರಡಿಸಿರುವ ನಿದರ್ಶನವು ಇದೆ.

ಇನ್ನೊಂದು ಸಾಮ್ಯತೆ ಇರುವ ಪ್ರಕರಣವಾದ ಶ್ರೀಮತಿ ತೇಜಶ್ರೀ ಕೆ. ಕೆಮಟೂರ ರವರ ಸ್ಥಾವರದ ಸ್ಥಳದಲ್ಲಿ ರೆಸ್ಟೋರೆಂಟ್ ಇದ್ದು, ಶಾಖಾಧಿಕಾರಿಯವರು **RAPDRP System** ನಲ್ಲಿ ಅಪಲೋಡ್ ಮಾಡುವ ಸಮಯದಲ್ಲಿ ಮಾಪಕದ ಸ್ಥಿರಾಂಕ **K-10** ರ ಬದಲಾಗಿ **K-1** ಎಂದು ಅಪಲೋಡ್ ಆಗಿ ಎಪ್ರಿಲ್-**2016** ರಿಂದ ಡಿಸೆಂಬರ-**2016** ರ ಅವಧಿಗೆ ಮಾಪಕದ ಸ್ಥಿರಾಂಕ

ಬಿಟ್ಟು ಹೋಗಿದೆ ಎಂದು ವ್ಯತ್ಯಾಸದ ಮೊತ್ತ ಪಾವತಿಸಲು ಆಕ್ಷೇಪಿಸಿರುವ ಅಂಶದಡಿಯಲ್ಲಿ ಕಂದಾಯ ಕೊರತೆ (**Short Claim**) ಮೊತ್ತವನ್ನು ತುಂಬುವಂತೆ ಆದೇಶಿಸಿರುವುದು–ಅದೇಶ ಸಂಖ್ಯೆ: ಅಇಂ(ವಿ)/ಉಲೆನಿ/ಹಿಸ–1/ಗ್ರಾಕುಂಕೊನಿವೇ/ಕಡತ–**219**/ಸಿವಾಯ್ಎಸ್–**710** ದಿನಾಂಕ **23. 08.2017** ರಲ್ಲಿ **KERC Condition of Supply** ಅನುಛೇದ **29.08** ರ ಅನ್ವಯ ನಿಯಮಾನುಸಾರ ಸರಿ ಇರುವುದಾಗಿಯೂ ಹಾಗೂ ಸದರಿ ಸ್ಥಾವರದ ಹಿಂಬಾಕಿ ಮೊತ್ತವನ್ನು ಗ್ರಾಹಕರು ಕಂಪನಿಗೆ ಪಾವತಿಸಲು ಭಾಧ್ಯಸ್ಥರಾಗಿರುವುದನ್ನು ಆದೇಶಿಸಿರುವುದರಿಂದ ಗ್ರಾಹಕರು ಮಾನ್ಯ ವಿದ್ಯುತ್ ಲೋಕಪಾಲರು ಬೆಂಗಳೂರು ಇವರಲ್ಲಿ ಅಪೀಲ್ ಮಾಡಿದಾಗ್ಯೂ ಸಹ ಸದರಿ ಪ್ರಕರಣವನ್ನು ಮಾನ್ಯ ವಿದ್ಯುತ್ ಲೋಕಪಾಲರು ಬೆಂಗಳೂರು ರವರು ಪ್ರಕರಣದ ಕುರಿತು ವಸ್ತುಸ್ಥಿತಿ ಅಂಶವನ್ನು ಈ ಕೆಳಗಿನಂತೆ ಅವಲೋಕಿಸಿರುತ್ತಾರೆ.

> ***"The meter reader of the supply company/licensee while reding the meter for billing, instead of taking constnt as 10 has inadvertently taken 1. There is no doubt that the meter reader has committed a mistake. However, the appellant cannot be allowed to take advantage of the mistake of the employee of Supply Compnay/Licensee."***

ಈ ನಿಮಿತ್ತ, ಪ್ರಕಣರ ಸಂಖ್ಯೆ: **OMB/H/G-289/2017** ರಲ್ಲಿ **"The appeal of the appellant is dismissed"** ಎಂದು ಕ್ರಮ ಸಂಖ್ಯೆ: **OMB/H/G-289/2017/D-1108 DT. 25.10.2018** ರಲ್ಲಿ ಮಾನ್ಯ ವಿದ್ಯುತ್ ಲೋಕಪಾಲರು ಬೆಂಗಳೂರು ರವರು ಆದೇಶ ಹೊರಡಿಸಿರುವ ನಿದರ್ಶನವು ಇದೆ.

ಈ ಮೇಲಿನ ಎರಡೂ ಪ್ರಕರಣದಲ್ಲಿ ಸಾಮ್ಯತೆ ಇರುವುದೇನೆಂದರೆ,- ಒಂದು ಪ್ರಕರಣವು ಮಾಪಕ MNR ಆಗಿರುವುದರಿಂದ ವಿದ್ಯುತ್ ಬಳಕೆಯ ಸರಾಸರಿ ಮೇಲೆ ಕಂದಾಯ ಕೊರತೆ (Short Claim) ಮೊತ್ತವನ್ನು ಗ್ರಾಹಕರಿಂದ ಭರಿಸಿಕೊಳ್ಳುವುದು. ಇನ್ನೊಂದು ಪ್ರಕರಣ ಮಾಪಕದ ಸ್ಥಿರಾಂಕ **K-10** ರ ಬದಲಾಗಿ **K-1** ಎಂದು ಬದಲಾಗಿರುವ ಅಂಶದಡಿಯಲ್ಲಿ ಕಂದಾಯ ಕೊರತೆ (Short Claim) ಮೊತ್ತವನ್ನು ಸಹ ಗ್ರಾಹಕರಿಂದ ಭರಿಸಿಕೊಳ್ಳುವುದು ಕಂಡುಬಂದಿರುತ್ತದೆ.

ಅದೇ ತೆರನಾಗಿ ಈ ಮೇಲಿನ ಎರಡನೇಯ ಪ್ರಕರಣದ ಅಂಶವನ್ನು ಇದಕ್ಕೆ ತುಲನೆ ಮಾಡಿದಾಗ, HT-9 ಸ್ಥಾವರ ಪ್ರಕರಣದಲ್ಲಿಯೂ ಸಹ ಇಲಾಖಾ ಸಂಬಂಧಪಟ್ಟವರು ನಿರ್ಲಕ್ಷತೆಯಿಂದ ಮಾಪಕಕ್ಕೆ **Wiring connection** ತಪ್ಪಾಗಿ ಮಾಡಿದ್ದು ಇರುತ್ತದೆ. ಆದರೆ ಉದ್ದೇಶಪೂರ್ವಕವಾಗಿ ತಪ್ಪು ಮಾಡಿರುವುದಿಲ್ಲ. ಇಲ್ಲಿ ನಿರ್ಲಕ್ಷತೆಯೇ ಮುಖ್ಯ ಕಾರಣವಾಗಿರುವುದರಿಂದ, HT-9 ಸ್ಥಾವರಕ್ಕೆ ದಿನಾಂಕ 29.04.2014 ರಂದು ತಪ್ಪಾಗಿ ವೈರಿಂಗ್ ಕನೆಕ್ಷನ್ ಮಾಡಿದ್ದನ್ನು ದಿನಾಂಕ 26.12.2018 ರಂದು ಪರಿಶೀಲಿಸದ ವೇಳೆಯಲ್ಲಿ ಕಂಡುಬಂದಿರುವುದರಿಂದ ದಿನಾಂಕ 29.04.2014 ರಿಂದ ದಿನಾಂಕ 26.12.2018 ರ ಅವಧಿಯವರೆಗೆ ಪ್ರತಿಶತ 50 ರಷ್ಟು ವಿದ್ಯುತ್ ಬಳಕೆ ಪ್ರಮಾಣವು ಕಡಿಮೆ ದಾಖಲಾಗಿರುತ್ತದೆ. ಇವುಗಳ ಉಪಯೋಗ ಗ್ರಾಹಕರು ಪೂರ್ಣ ಪ್ರಮಾಣದಲ್ಲಿ ಪಡೆದು ಕೊಂಡಿರುವುದು ಪ್ರಾಯೋಗಿಕವಾಗಿ ಕಂಡುಬಂದಿರುತ್ತದೆ.

ಆದ್ದರಿಂದ, ***"There is no doubt that the Assitant Executive Engineer(Ele) HTMR Sub-division, Sirsi has committed a mistake in wiring. However, the appellant cannot be allowed to take advantage of the mistake of the employee of Supply Company/Licensee."***

ಈ ಪ್ರಯುಕ್ತ, ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಮೇಲೆ ದಾಖಲಿಸಿದ ಎಲ್ಲಾ ಅಂಶವನ್ನು ಅವಲೋಕಿಸಿ, ಆಲಿಸಿ ಮತ್ತು ಪರಾಮರ್ಶಿಸಿರುವ ಆಧಾರದಡಿಯಲ್ಲಿ ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಗೆ ಅದೇಶ ಸಂಖ್ಯೆ: ಹೆಸ್ಕಾಂ/ಜಿಎಂ(ಟಿ)/ಇಇ-4/ಎಓ/13-14/ಸಿವಾಯ್‌ಎಸ್-769 ದಿನಾಂಕ 16.07.2013. ಹೆಸ್ಕಾಂ.,/ಪ್ರವ್ಯ/ಇಇ-4/ಎಓ/14-15/ಸಿವಾಯ್‌ಎಸ್-1509 ದಿನಾಂಕ 16.08.2014 ಹಾಗೂ ಹೆಸ್ಕಾಂ/ಜಿಎಂ(ಟಿ)/ಇಇ-4/ಎಓ/17-18/ಸಿವಾಯ್‌ಎಸ್-5232 ದಿನಾಂಕ: 02.02.2018 ರನ್ವಯ ದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಗಿನಂತೆ ಅದೇಶಲಾಗಿದೆ.

ಆದೇಶ ಸಂಖ್ಯೆ:ಅಇಂ(ವಿ)/ಉಲೆನಿ/ಹಿಸ-2/ಗ್ರಾಕುಂಕೊನಿವೇ/ಪ್ರ.ಸಂ:23/2019-20/ಸಿವೈಎಸ್- 45 ದಿನಾಂಕ: 01 JUL 2019

1) ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳಿಂದ ದೂರುದಾರ ಗ್ರಾಹಕನ ಮನವಿಯನ್ನು ಈ ಮೂಲಕ ತಿರಸ್ಕರಿಸಿದೆ.

2) HT-9 ಸ್ಥಾವರಕ್ಕೆ ವಿಧಿಸಿರುವ ಹಿಂಬಾಕಿ (Short Claim) ಮೊತ್ತ ರೂ. **1,81,88,063.00** (ರೂ. ಒಂದು ಕೋಟಿ ಎಂಬತ್ತೊಂದು ಲಕ್ಷ ಎಂಬತ್ತೆಂಟು ಸಾವಿರದ ಆರವತ್ತ ಮೂರು ಮಾತ್ರ) ವನ್ನು ದೂರುದಾರ ಗ್ರಾಹಕದಾರನು ಈ ಆದೇಶದಿಂದ 15 ದಿನದೊಳಗಾಗಿ 1 ನೇ ಎದುರುದಾರ ನಿಗಮಕ್ಕೆ ಭರಣಮಾಡ ತಕ್ಕದ್ದು. ತಪ್ಪಿದಲ್ಲಿ ಸದರಿ ಸ್ಥಾವರದ ವಿದ್ಯುತ್ ಜೋಡಣೆಯನ್ನು ನಿಲುಗಡೆಗೊಳಿಸತಕ್ಕದ್ದು.

3) ಕರ್ತವ್ಯದಲ್ಲಿ ನಿರ್ಲಕ್ಷತನದ ಕುರಿತು ಯಾವತ್ತೂ ಚೌಕಾಸಿ ಬಗ್ಗೆ ಕ್ರಮ ಕೈಗೊಳ್ಳುವ ಹಕ್ಕನ್ನು ಇಲಾಖೆಗೆ ಊರ್ಜಿತದಲ್ಲಿ ಇಟ್ಟಿದೆ.

ತೆರೆದ ವೇದಿಕೆಯಲ್ಲಿ ಆದೇಶ ಉದ್ಘೋಶಿಸಲಾಯಿತು.

| | | |
|---|---|---|
| ಶ್ರೀ ಸಿ.ಎಫ್.ಈರೇಶ,<br>ಸದಸ್ಯರು, ಗ್ರಾ.ಕು.ಕೊ.ನಿ.ವೇ,<br>ಶಿರಸಿ ವೃತ್ತ, ಹೆಸ್ಕಾಂ, ಶಿರಸಿ. | ಶ್ರೀ ಶರೀಪ್ ಎ,<br>ಉಪಲೆಕ್ಕನಿಯಂತ್ರಣಾಧಿಕಾರಿ,<br>ಸದಸ್ಯರು, ಗ್ರಾ.ಕು.ಕೊ.ನಿ.ವೇ,<br>ಶಿರಸಿ ವೃತ್ತ, ಹೆಸ್ಕಾಂ, ಶಿರಸಿ. | 01/07.<br>ಶ್ರೀ ಓ.ಎಸ್.ಶಶಿಧರ,<br>ಅಧೀಕ್ಷಕ ಇಂಜನೀಯರ್(ವಿ),<br>ಅಧ್ಯಕ್ಷರು ಗ್ರಾ.ಕು.ಕೊ.ನಿ.ವೇ, ಶಿರಸಿ ವೃತ್ತ, ಹೆಸ್ಕಾಂ, ಶಿರಸಿ. |

1. ಪ್ರತಿಯನ್ನು ಗೌರವಪೂರ್ವಕವಾಗಿ ಆಪ್ತ ಕಾರ್ಯದರ್ಶಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗ,16ಸಿ-1, ವಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ವಸಂತ ನಗರ(ಜೈನ್ ಆಸ್ಪತ್ರೆ ಹಿಂಭಾಗ), ಬೆಂಗಳೂರು-560052 ರವರಿಗೆ ಕಳುಹಿಸಿದೆ ಹಾಗೂ ಸದರಿ ಮಾಹಿತಿಯನ್ನು ಮಾನ್ಯ ಲೋಕಪಾಲರ ಅವಗಾಹನೆಗಾಗಿ ತರಲು ಕೋರಿದೆ.
2. ಪ್ರತಿಯನ್ನು ಗೌರವಪೂರ್ವಕವಾಗಿ ಮುಖ್ಯ ಇಂಜಿನೀಯರ(ವಿ), ಹುಬ್ಬಳ್ಳಿ ವಲಯ, ಹೆಸ್ಕಾಂ, ಹುಬ್ಬಳ್ಳಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
3. ಪ್ರತಿಯನ್ನು ಅಭಿನಂದನಾನಾಪೂರ್ವಕವಾಗಿ ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ನಿಗಮ ಕಛೇರಿ, ಹೆಸ್ಕಾಂ, ನವನಗರ, ಹುಬ್ಬಳ್ಳಿ ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಪ್ರತಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು / ತಾಂತ್ರಿಕ ನಿರ್ದೇಶಕರು/ ಮುಖ್ಯ ಆರ್ಥಿಕ ಅಧಿಕಾರಿಯವರ/ಆರ್ಥಿಕ ಸಲಹೆಗಾರರು(ಆ.ಪ) ರವರ ಆಪ್ತ ಕಾರ್ಯದರ್ಶಿಗಳು, ನಿಗಮ ಕಛೇರಿ, ಹು.ವಿ.ಸ.ಕಂ.ನಿ, ನವನಗರ, ಹುಬ್ಬಳ್ಳಿ ಇವರಿಗೆ ಕಳುಹಿಸಿದೆ ಹಾಗೂ ವಿಷಯವನ್ನು ಮಾನ್ಯರ ಅವಗಾಹನೆಗಾಗಿ ತರಲು ಕೋರಿದೆ.
5. ಪ್ರತಿ ಕಾರ್ಯನಿರ್ವಾಹಕ ಇಂಜಿನೀಯರ(ವಿ), (ಆರ್ ಎ), ನಿಗಮ ಕಛೇರಿ, ಹೆಸ್ಕಾಂ., ಹುಬ್ಬಳ್ಳಿ ರವರ ಮಾಹಿತಿಗಾಗಿ.
6. ಪ್ರತಿ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಹೆಸ್ಕಾಂ., ಹೊನ್ನಾವರ ರವರ ಮಾಹಿತಿಗಾಗಿ.
7. ಪ್ರತಿ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಎಂ.ಟಿ ವಿಭಾಗ, ಹೆಸ್ಕಾಂ., ಹುಬ್ಬಳ್ಳಿ ರವರ ಮಾಹಿತಿಗಾಗಿ.
8. ಪ್ರತಿ ಸಹಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾರ್ಯ ಮತ್ತು ಪಾಲನಾ ಉಪವಿಭಾಗ, ಹೆಸ್ಕಾಂ., ಭಟ್ಕಳ ರವರ ಮಾಹಿತಿಗಾಗಿ ಹಾಗೂ ಗ್ರಾಹಕರು ಆದೇಶ ಪಾಲಿಸುವುದನ್ನು ಸೂಕ್ಷ್ಮವಾಗಿ ಗಮನಿಸುವುದು. ಒಂದು ವೇಳೆ ಆದೇಶ ಪಾಲಿಸದೇ ಇದ್ದಲ್ಲಿ ಆದೇಶದಲ್ಲಿ ನೀಡಿದ ನಿರ್ದೇಶನದಂತೆ ಸೂಕ್ತ ಕ್ರಮ ಕೈಗೊಳ್ಳುವುದು.
9. ಪ್ರತಿ ಸಹಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಹೆಚ್.ಟಿ.ಎಮ್.ಅರ್. ಉಪವಿಭಾಗ, ಹೆಸ್ಕಾಂ., ಶಿರಸಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
10. ಪ್ರತಿ ಸಹಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), 33 ಕೆ.ವಿ, ಎಸ್ ಮತ್ತು ಎಲ್ ಉಪವಿಭಾಗ, ಹೆಸ್ಕಾಂ., ಶಿರಸಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ .
11. ಪ್ರತಿ ಶ್ರೀ ಸಿ.ಎಫ್.ಈರೇಶ (CGRF) ಸದಸ್ಯರು ಸಾ॥ ಕಂತ್ರಾಜಿ, ಪೋ॥ ಗುಡ್ನಾಪುರ, ತಾ॥ ಶಿರಸಿ ರವರ ಮಾಹಿತಿಗಾಗಿ.
12. ಪ್ರತಿ ಮೆನೆಜರ್, ನವೀನ್ ಹೊಟೇಲ್ ಲಿ., ಸಾ॥ ಮುರ್ಡೇಶ್ವರ, ತಾ॥ ಭಟ್ಕಳ ರವರ ಮಾಹಿತಿಗಾಗಿ ಹಾಗೂ ಆದೇಶದಲ್ಲಿ ದಾಖಲಿಸಿದ ಮೊತ್ತವನ್ನು ಭರಣ ಮಾಡುವಂತೆ ತಕ್ಷಣ ಕ್ರಮ ಕೈಗೊಳ್ಳುವುದು.
13. .ಕಛೇರಿ ಪ್ರತಿ/ ಮಹಾ ಕಡತ.